
ಡಾ. ರಾಜೇಗೌಡ ಹೊಸಹಳ್ಳಿ

ವ್ಯಕ್ತಿ ಪರಿಚಯ



ಡಾ. ಹಂಪನಹಳ್ಳಿ ತಿಮ್ಮೇಗೌಡ

ಜನಪ್ರಿಯ ಜಾನಪದ ಪುಸ್ತಕ ಮಾಲೆ – ೪೪

ಡಾ. ರಾಜೇಗೌಡ ಹೊಸಹಳ್ಳಿ

ವ್ಯಕ್ತಿ ಪರಿಚಯ

ಡಾ. ಹಂಪನಹಳ್ಳಿ ತಿಮ್ಮೇಗೌಡ

ಕರ್ನಾಟಕ ಜಾನಪದ ಪರಿಷತ್ತು
ನಂ.1, ಜಲದರ್ಶಿನಿ ಲೇ ಔಟ್,
ಎಂ. ಎಸ್. ರಾಮಯ್ಯ ಆಸ್ಪತ್ರೆ ಮಹಾದ್ವಾರದ ಹತ್ತಿರ,
ಹೊಸ ಬಿ.ಇ.ಎಲ್. ರಸ್ತೆ, ಬೆಂಗಳೂರು – 560 054

DR. RAJEGOWDA HOSAHALLI-
A pen portrait - by Dr. HAMPANAHALLI THIMMEGOWDA.
Published by : KARNATAKA JANAPADA PARISHATHU,
No.1, Jaladarshini Layout (Near M.S. Ramaiah Hospital Gate),
New B.E.L. Road, Bengalooru - 560 054. Ph : 080-23605033.
Pages : 32 Price : Rs. 10 2010.

ಪ್ರಥಮ ಮುದ್ರಣ ೨೦೧೦

ಪ್ರತಿಗಳು ೨೦೦೦

ಪುಟಗಳು ೩೨

ಬೆಲೆ ರೂ.೧೦ (ಹತ್ತು ರೂಪಾಯಿ)

ಮುದ್ರಕರು ಕೃತಿಕ ಪ್ರಿಂಟ್-ಟ್ರೇಡ್
ನಂ. 58, 1ನೇ ಕ್ರಾಸ್, ಜೆ.ಕೆ. ಪುರಂ
ವಿನಾಯಕನಗರ, ಆಡುಗೋಡಿ ಪೋಸ್ಟ್
ಬೆಂಗಳೂರು - 560 030
ಮೊಬೈಲ್ - 98441 14958

ಅಧ್ಯಕ್ಷರ ಮಾತು

ಕರ್ನಾಟಕ ಜಾನಪದ ಪರಿಷತ್ತಿನ ಹಲವು ಯೋಜನೆಗಳಲ್ಲಿ ಜನಪದ ಪುಸ್ತಕ ಪ್ರಕಟಣೆ ಒಂದು. ಇದರಲ್ಲಿ ವಿದ್ವತ್ ಗ್ರಂಥಗಳ ಪ್ರಕಟಣೆಗಳೇ ಹೆಚ್ಚು. ಇವುಗಳ ಜೊತೆಗೆ 'ಜನಪ್ರಿಯ ಜಾನಪದ ಪುಸ್ತಕ ಮಾಲೆ' ಯನ್ನು ಪ್ರಾರಂಭಿಸಿದೆ. ಜಾನಪದವನ್ನು ಜನಸಾಮಾನ್ಯರಿಗೆ ತಲುಪಿಸುವುದು ಇದರ ಮುಖ್ಯ ಉದ್ದೇಶ. ಇದರಲ್ಲಿ ಜಾನಪದಕ್ಕೆ ದುಡಿದಿರುವ, ದುಡಿಯುತ್ತಿರುವ ಕಲಾವಿದರು, ಕಲೆಗಳು, ಸಂಗ್ರಾಹಕರು, ವಿದ್ವಾಂಸರು, ಸ್ವಾರಸ್ಯಕರವಾದ ಉಪಯುಕ್ತವಾದ ಜನಪದ ಗೀತಸಾಹಿತ್ಯದ ಸೋದಾಹರಣ ವ್ಯಾಖ್ಯಾನ – ಮೊದಲಾದ ವಿಷಯಗಳಿಗೆ ಸಂಬಂಧಿಸಿದಂತೆ, ನಾಡಿನ ಪ್ರಸಿದ್ಧ ಸಾಹಿತಿ ಸಂಶೋಧಕರಿಂದ ಕಿರುಗ್ರಂಥಗಳನ್ನು ಬರೆಯಿಸಿ, ಪ್ರಕಟಿಸಿ, ಕೇವಲ ಹತ್ತು ರೂಪಾಯಿ ಬೆಲೆಗೆ ಒದಗಿಸಲು ಯೋಜಿಸಿದೆ. ಕಡಿಮೆ ಅವಧಿಯಲ್ಲಿ ಓದಿಕೊಳ್ಳಬಹುದಾದ ಈ ಗ್ರಂಥಗಳು ಹಲವು ಮಾಹಿತಿಗಳನ್ನು ಸಂಕ್ಷಿಪ್ತವಾಗಿ ತಿಳಿಯಪಡಿಸುತ್ತವೆ.

ಈ ಜನಪ್ರಿಯ ಪುಸ್ತಕ ಮಾಲೆಗೆ **ಡಾ. ಹಂಪಸನಹಳ್ಳಿ ತಿಮ್ಮೇಗೌಡ** ಅವರು **ಡಾ. ರಾಜೇಗೌಡ ಹೊಸಹಳ್ಳಿ** ಅವರನ್ನು ಕುರಿತ ಗ್ರಂಥವನ್ನು ಬರೆದುಕೊಟ್ಟಿದ್ದಾರೆ. ಗ್ರಂಥದ ಲೇಖಕರಿಗೂ ಗ್ರಂಥ ಪ್ರಕಟಣಾ ಸಮಿತಿಯ ಸದಸ್ಯರಿಗೂ ಕೃತಜ್ಞತೆಗಳನ್ನು ಅರ್ಪಿಸಿ, ಸಹೃದಯರು ಈ ಪುಸ್ತಕವನ್ನು ಸ್ವಾಗತಿಸಬೇಕೆಂದು ಕೇಳಿಕೊಳ್ಳುತ್ತೇನೆ.

ನಾಡೋಜ ಡಾ. ಜಿ. ನಾರಾಯಣ
ಅಧ್ಯಕ್ಷರು
ಕರ್ನಾಟಕ ಜಾನಪದ ಪರಿಷತ್ತು

ಬೆಂಗಳೂರು
೧೪-೦೧-೨೦೦೦

ಡಾ. ರಾಜೇಗೌಡ ಹೊಸಹಳ್ಳಿ

ರಾಜೇಗೌಡ ಅವರು ಮಲೆನಾಡಿನಲ್ಲಿ ಹುಟ್ಟಿದರೂ ಬಯಲುನಾಡನ್ನೂ ಕಂಡವರು. ಮಲೆನಾಡು ಮತ್ತು ಬಯಲುನಾಡಿನ ಎರಡೂ ಸಂಸ್ಕೃತಿಗಳೂ ಅವರಲ್ಲಿ ಮೇಳೈಸಿವೆ. ಅದಕ್ಕೆ ಕಾರಣ ಒಂದೆಡೆ ತಂದೆಯದಾದರೆ ಮತ್ತೊಂದು ತಾಯಿಯದು. ತಾಯಿ ಬಯಲು ಸೀಮೆಯ ಆಗುಹೋಗುಗಳಲ್ಲಿ ಬೆಳೆದು ಬಂದವರಾಗಿದ್ದರು. ತಂದೆ ಹುಟ್ಟಿನಿಂದಲೇ ಮಲೆನಾಡಿನ ಹಸಿರು ವಾತಾವರಣವನ್ನು ಹೊತ್ತು ಬೆಳೆದವರು. ಆ ಕಾರಣದಿಂದ ರಾಜೇಗೌಡರಲ್ಲಿ ಎರಡೂ ಕಡೆಯ ಬದುಕಿನ ಅರಿವಿನ ಒಳಮರ್ಮಗಳು ಚೆನ್ನಾಗಿ ತಿಳಿದಿವೆ. ಜೊತೆಗೆ ಭಾರತ ವಸಾಹತುಶಾಹಿತ್ವವನ್ನು ಕಳೆದುಕೊಂಡು ಸ್ವಾತಂತ್ರ್ಯವನ್ನು ಬಯಸುತ್ತಿದ್ದ ಸಂದರ್ಭದಲ್ಲಿ ಹುಟ್ಟಿದವರು. ಪರಾವಲಂಬನೆಯಿಂದ ಸ್ವಾವಲಂಬನೆಯ ಕಡೆ ದೇಶ ಸಾಗುವ ಸಂದರ್ಭ ಅದು. ದೇಶ ದೇಶೀಯತೆಯನ್ನು ಬಯಸುತ್ತಿದ್ದಾಗ, ಸಮಾಜ ಪರಿವರ್ತನೆಯನ್ನು ಕಾಣಲು ಹವಣಿಸುತ್ತಿದ್ದಾಗ ರಾಜೇಗೌಡರ ಬೆಳವಣಿಗೆಯು ಅದೇ ಮಾದರಿಯಲ್ಲಿ ಸಾಗುವುದನ್ನು ಅವರ ಬದುಕು ಮತ್ತು ಬರಹಗಳ ಮೂಲಕ ಕಾಣಲು ಸಾಧ್ಯವಿದೆ.

ರಾಜೇಗೌಡರು ದೇಶೀಮೂಲದಿಂದ ಬೆಳೆದುಬಂದವರು. ಈ ಮಣ್ಣಿನ ಸಂಸ್ಕೃತಿ ಅವರನ್ನು ಅಪಾರವಾಗಿ ಸೆಳೆಯಿತು. ಅದರ ಮೂಲಕವೇ ಅವರ ಸೃಜನಶೀಲತೆ ಮುಂದೆ ಕವಲೊಡೆದು ನಾನಾ ಪ್ರಕಾರಗಳಲ್ಲಿ ಬೆಳೆಯಲು ಕಾರಣವಾಯಿತು. ಇದಕ್ಕೆ ಮೂಲ ಪ್ರೇರಣೆಯಾದದ್ದು ಕುವೆಂಪು ಅವರನ್ನು ಆದರ್ಶವಾಗಿ ಇಟ್ಟುಕೊಂಡಿದ್ದು ಮತ್ತು ಅನುಸರಿಸಿದುದು ಆಗಿದೆ. ರಾಜೇಗೌಡರ ಆರಂಭದ ಬರಹಗಳು ಜಾನಪದದಿಂದಲೇ ಆದರೂ ಅನಂತರದ ಬರಹ

ಸಂಶೋಧನೆ, ಕಥಾಸಾಹಿತ್ಯ, ಕಾದಂಬರಿಗಳ ಕಡೆಗೂ ತಿರುಗಿತು. ಜಾನಪದಕ್ಕೆ ಮೂಲಸೆಲೆ ಗ್ರಾಮೀಣ ಪರಿಸರದಲ್ಲಿ ಹುಟ್ಟಿ ಬೆಳೆದದ್ದು. ಅಲ್ಲಿ ಬದುಕಿನ ರೀತಿನೀತಿಗಳನ್ನು ಅರಗಿಸಿಕೊಂಡಿದ್ದು. ಜಾನಪದ ಕೇವಲ ಸಂಗ್ರಹದ ವಸ್ತುವಲ್ಲ. ಅದು ವಿಶ್ಲೇಷಣೆಗೆ ಮಾತ್ರ ಸೀಮಿತವಲ್ಲ. ಅದರಿಂದಾಚೆಗೂ ಅದು ಸಾದೃಶ್ಯ ಪಡೆಯಬಲ್ಲದು ಎಂಬುದಕ್ಕೆ ಅವರ ಬರಹಗಳೇ ಸಾಕ್ಷಿಯಾಗುತ್ತವೆ.

ರಾಜೇಗೌಡರು ೩೧-೭-೧೯೪೯ರಂದು ಹಾಸನ ಜಿಲ್ಲೆ, ಆಲೂರು ತಾಲ್ಲೂಕಿನ ಮರಸು ಹೊಸಹಳ್ಳಿಯಲ್ಲಿ ಜನಿಸಿದರು. ತಂದೆ ಎಚ್.ಎಸ್. ರಂಗಪ್ಪ, ತಾಯಿ ರಂಗಮ್ಮ. ಮೊದಲ ಅಕ್ಷರಾಭ್ಯಾಸ ಕೂಲಿಮಠದ ಮೂಲಕ. ಶಾಲೆ ಎಂಬುದಿಲ್ಲ, ಯಾರದೋ ಜಗಲಿಯೇ ಶಾಲೆ. ಸ್ವಾತಂತ್ರ್ಯ ಬಂದ ಹೊಸದರಲ್ಲಿ ಇಡೀದೇಶದಲ್ಲಿ ನಡೆದುಹೋಗುತ್ತಿದ್ದ ಅಭಿವೃದ್ಧಿಯ ಸಂಕೇತವಾಗಿ ಹೊಸಹಳ್ಳಿಗೆ ಬೇಸಿಕ್‌ಶಾಲೆ ಬಂದಿತು. ಅದಕ್ಕೆ ಮೊದಲು ಕಾರಣಕರ್ತರು ಇವರ ಅಪ್ಪನೇ. ಅಂದಿನ ಸ್ವಾತಂತ್ರ್ಯ ಹೋರಾಟಗಾರರೂ ಶಾಸಕರೂ ಆಗಿದ್ದ ಬೋರಣ್ಣಗೌಡರ ಬಳಿ ಟೋಪಿ, ಕಚ್ಚೆ ಪಂಚೆ ಜುಬ್ಬಗಳೆಲ್ಲವೂ ಮಲೆನಾಡಿನ ಉಡುಗೆಗಳಾದ ಕರಿಟೋಪಿ, ಕರಿಕೋಟು, ತುಂಡುಪಂಚೆಗಳನ್ನು ಬದಲಾಯಿಸುತ್ತಿದ್ದವು. ಇದು ಅಂದಿನ ಸಮಾಜ ಬದಲಾಗುತ್ತಿದ್ದ ಪರಿ. ಆದಾಗ್ಯೂ ಇವರಪ್ಪ ಮಾತ್ರ ಕೊನೆವರೆಗೂ ಕರಿಕೋಟನ್ನು ಬದಲಿಸಲಿಲ್ಲವಂತೆ. ಇದೇ ಪರಿವರ್ತನೆಯ ಸಂದರ್ಭದಲ್ಲೂ ತಮ್ಮದನ್ನು ಉಳಿಸಿಕೊಳ್ಳುವ ರೀತಿ. ತಂದೆಯ ಗುಣವನ್ನು ರಾಜೇಗೌಡರ ಮೂಲಕವೂ ಕಾಣಲು ಸಾಧ್ಯ. ಅವರ ಅಪ್ಪನ ಹೋರಾಟದಿಂದ ಊರಿಗೊಂದು ಶಾಲೆಯೇನೋ ಬಂದಿತು. ಅದರ ಪ್ರಾರಂಭ ಅವರ ಮನೆ ಜಗಲಿಯ ಅತ್ತ ಇತ್ತ ಇದ್ದ ಎರಡು ಕೊಠಡಿಗಳು. ಅಲ್ಲೇ ಅವರ ಪ್ರಾಥಮಿಕ ಶಿಕ್ಷಣ. ಮಾಧ್ಯಮಿಕ ಶಿಕ್ಷಣ ಆಲೂರಿನಲ್ಲಿ. ಪ್ರೌಢ ವಿದ್ಯಾಭ್ಯಾಸ ಹಾಸನದ ಬಾಲಕರ ಸರ್ಕಾರಿ ಶಾಲೆ. ಪದವಿ ಶಿಕ್ಷಣ ಹಾಸನದ ಸರ್ಕಾರಿ ಕಾಲೇಜಿನಲ್ಲಿ (೧೯೭೨), ಎಂ.ಎ. ಓದಿದ್ದು ಮಂಗಳೂರಿನ ಕೊಣಾಜೆಯ ಮಂಗಳ ಗಂಗೋತ್ರಿಯಲ್ಲಿ (೧೯೭೪). ೨೦೦೧ ರಲ್ಲಿ

ಬೆಂಗಳೂರು ವಿಶ್ವವಿದ್ಯಾನಿಲಯಕ್ಕೆ ಡಾ. ಬಸವರಾಜ ಕಲ್ಗುಡಿ ಮಾರ್ಗದರ್ಶನದಲ್ಲಿ "ತಂಬೂರಿ ಜಾನಪದ ಸಂಪ್ರದಾಯದ ಸಾಹಿತ್ಯ : ಒಂದು ಸಾಂಸ್ಕೃತಿಕ ಅಧ್ಯಯನ" ಎಂಬ ಪ್ರೌಢಪ್ರಬಂಧವನ್ನು ಸಲ್ಲಿಸಿ ಪಿಎಚ್.ಡಿ. ಪದವಿಯನ್ನು ಪಡೆದಿದ್ದಾರೆ. ಆರಂಭದಲ್ಲಿ ಪ್ರೇರಣೆ ನೀಡಿದ ಮಾಸ್ತರರೆಂದರೆ ಕೂಲಿ ಮಾಸ್ತರಾದ ಕರುಗುಡ್ಡನಹಳ್ಳಿ ಮೇಷ್ಟರು. ಅನಂತರ ಖಂಡೇರಾವ್, ಮಾಸ್ತಿಗೌಡ, ಮೃತ್ಯುಂಜಯಪ್ಪ, ಮಂಜುನಾಥ್, ಹಲಗಪ್ಪ, ಅಬ್ದುಲ್ ಖದೀರ್, ಬಿ.ಎ. ವಿವೇಕ ರೈ ಮುಂತಾದವರು. ಅವರ ಶಿಸ್ತು, ಪ್ರಾಮಾಣಿಕತೆ, ಜೀವನದ ರೀತಿನೀತಿಗಳು ಭಾರತೀಯ ಮಾದರಿಗಳಾಗಿದ್ದು, ಯಾವುದೇ ಕಾಸುಕೊಸರುಗಳಿಲ್ಲದ ಮಣ್ಣುಮಡಕೆಯಂತಿದ್ದದ್ದು ಎಂದು ಹೆಮ್ಮೆಪಡುತ್ತಾರೆ.

ಮೇಲಿನ ಗುರುಗಳು ವಿದ್ಯೆ ಹೇಳಿಕೊಟ್ಟ ಗುರುಗಳಾದರೆ, ರಾಜೇಗೌಡರಿಗೆ ಬದುಕಿನ ಅನುಭಾವಿ ಗುರು ಎಂದರೆ ಅವರ ಅಜ್ಜ ಸೋಮೇಗೌಡರು. ತಂದೆಯ ತಂದೆ. ಮೂಢನಂಬಿಕೆಗಳಾಗಲೀ, ದೆವ್ವಗಿವ್ವಗಳ ಭಯವಾಗಲೀ ಇಲ್ಲದ ಮನುಷ್ಯ. ಕೆಟ್ಟದ್ದುಮಾಡಲು ಮಾತ್ರ ಭಯಪಡುತ್ತಿದ್ದವರು. ಅವರ ವೇಷ ಮಾತ್ರ ಥೇಟ್ ಗಾಂಧಿ ಮಹಾತ್ಮನಂತಹದ್ದು. ಅವರಂಥವರಿಂದಲೇ ಗಾಂಧಿ ಡ್ರೆಸ್‌ಕೋಡ್ ರೂಪುಗೊಂಡಿರಬೇಕು. ಅವರ ಅಜ್ಜಿಯದು ಕೋಪ ಬಂದರೆ ಗಾಂಧಿ ಮಹಾತ್ಮನ ಉಪವಾಸ. ಆಕೆಯಂಥವರಿಂದಲೇ ಗಾಂಧಿತತ್ವ ರೂಪುಗೊಂಡಿರಬೇಕು. ರಾಜೇಗೌಡರ ಅಪ್ಪ ಮೊಲೆಕುಡಿಯುವಾಗಲೇ ಅವರ ತಾಯಿ ತೀರಿಕೊಂಡರಂತೆ. ಮಕ್ಕಳಿಲ್ಲದ ಮಲತಾಯಿಗೆ ಅಪ್ಪನನ್ನು ಕಂಡರೆ ಪ್ರಾಣ. ಸೊಸೆಯೊಡನೆ ಕಾದಾಡಿ ಉಪವಾಸ ಕುಳಿತರೆ ನನ್ನಪ್ಪ ಹೆಂಡತಿಯನ್ನು ಹುಸಿಕೋಪದೊಡನೆ ಎಗರಾಡಿ ಮಲತಾಯಿಯನ್ನು ತೃಪ್ತಿಗೊಳಿಸಿ ಊಟ ಮಾಡಿಸುತ್ತಿದ್ದರು. ಇವು ನಮ್ಮ ಕೂಡುಕುಟುಂಬದ ಬದುಕು. ನಮ್ಮ ಹಳ್ಳಿಯವರಿಂದ ನಗರದವರು ಕಲಿಯಬೇಕಾದ ಸರಕುಗಳು ಬಹಳ ಇವೆಯೆಂದು

ರಾಜೇಗೌಡರು ಬೆಳೆದುಬಂದ ಕುಟುಂಬದ ಪರಿಸರವನ್ನು ಇಂದಿಗೂ ಸ್ಮರಿಸಿಕೊಳ್ಳುತ್ತಾರೆ.

ಅವರ ಅಜ್ಜ ಅವರ ಮೇಲೆ ಗಾಢಪ್ರಭಾವ ಬೀರಲು ಮತ್ತೊಂದು ಕಾರಣವೆಂದರೆ ಎಲ್ಲರನ್ನೂ ಸಮಾನವಾಗಿ ಕಾಣುತ್ತಿದ್ದ ಪರಿ. ಸರೀಕರನ್ನು, ಆಳುಕಾಳುಗಳನ್ನು, ಪೇಟೆಯ ಸಾಬರನ್ನು, ನೆರೆಹೊರೆಯ ಲಿಂಗದವರನ್ನು, ಕಿರುಕೆಲಸದವರನ್ನು ಎಂದಿಗೂ ಬೇರೆಬೇರೆಯಾಗಿ ನೋಡಿದವರಲ್ಲ. ಓದು ಬರಹ ಬಾರದಿದ್ದರೂ ಲೆಕ್ಕಾಚಾರ ತಪ್ಪಿದವರಲ್ಲ. ಪೇಟೆಯ ಅಧಿಕಾರಿಗಳನ್ನು ನೋಡಿದವರೂ ಅಲ್ಲ. ಆದರೆ ಬದುಕಿನ ಹುಡುಕಾಟಗಳ ತಾಳ್ಮೆ, ವ್ಯವಧಾನಗಳು ಅಪಾರ. ಆದರೆ ಅವರ ಅಪ್ಪ ಪೇಟೆತಿರುಗಾಡಿದವರು, ಮಕ್ಕಳನ್ನು ವಿದ್ಯಾವಂತರನ್ನಾಗಿಸಬೇಕೆಂದು ಹೋರಾಡುತ್ತಿದ್ದವರು. ಈ ತೀಕ್ಷ್ಣತೆಗಳ ನಡುವೆ ಬೆಳೆದ ರಾಜೇಗೌಡರಲ್ಲಿ ಅಜ್ಜನ ತಾಳ್ಮೆಯ ಹುಡುಕಾಟ, ಅಪ್ಪನ ಆಧುನಿಕಾಭಿವೃದ್ಧಿ ಸಂಕೇತ ಎರಡೂ ಕೂಡ ಮೇಳೈಸಿರುವುದನ್ನು ಅವರ ಬದುಕಿನಲ್ಲಿ ಕಾಣಬಹುದು.

ರಾಜೇಗೌಡರ ಅಪ್ಪ ಊರಿನ ಮುಂದಾಳು. ರಸ್ತೆಮಾಡುವುದು, ಊರಿನ ಸ್ವಚ್ಛತೆ, ಶಾಲೆಯ ಮಾಡುರಿಪೇರಿ, ದೇವಸ್ಥಾನಗಳ ರಿಪೇರಿ, ಬಾವಿ ಸೋಸುವುದು ಎಲ್ಲದಕ್ಕೂ ಅವರ ಅಪ್ಪನದೇ ನೇತೃತ್ವ. ಅವರ ಮನೆ ಊರಿನಿಂದ ಹೊರಗೆ. ಹೋಗಲು ಇದ್ದದ್ದು ಬಡ್ಡಿ ರಹಮಾನ್ ಸಾಹೇಬರ ಹೊಲದ ಮೇಲಿನ ದಾರಿ. ದಾರಿಗಾಗಿ ಸೆಣಸಾಟ. ಕೊನೆಗೆ ಊರಿಗೊಂದು ಒಕ್ಕಲು ಮಾಡಿದರು. ತಾಳಿದವನು ಬಾಳಿಯಾನು ಎಂಬಂತೆ ಅಂತಹ ಸಂದರ್ಭದಲ್ಲೂ ಶಾಂತಿಮಂತ್ರ ಜಪಿಸಿದವರು ಅವರ ಹಿರಿಯವರು. ಕೊನೆಗೆ ಗೆದ್ದದ್ದು ಅವರ ಶಾಂತಿ ಮಂತ್ರವೇ. ಊರಿಗೆ ಜ್ಞಾನೋದಯವಾಗಿ ತಾವೇ ರಸ್ತೆ ಮಾಡಿಕೊಟ್ಟಿದ್ದುಂಟು. ಗಾಂಧಿ ಅನುಯಾಯಿಗಳು ಅವರ ಹಿರೀಕರು. ಇಂಥವೇ ಗುಣಗಳನ್ನು ಕೂಡ ರಾಜೇಗೌಡರಲ್ಲಿ ಕಾಣಲು ಸಾಧ್ಯವಿದೆ. ಅಂದಿನ

ಬದಲಾವಣೆಗೆ ಅನುಗುಣವಾಗಿ ವಿದ್ಯಾಭಿವೃದ್ಧಿ, ಹೊಲಮನೆ ವಿಸ್ತರಣೆ, ಮದುವೆ, ಬಟ್ಟೆಬರೆ ಎಲ್ಲದರಲ್ಲೂ ನಾವೀನ್ಯತೆ ಬಂದಾಗ, ಅವು ಅವರ ಮನೆಯನ್ನು ಬಿಡಲಿಲ್ಲ. ಅವೆಲ್ಲವನ್ನೂ ದಾಟಿ ಬರಲು ಅಪ್ಪ ಬಿಟ್ಟ ಏರುಬ್ಬಸಗಳೆಲ್ಲವನ್ನೂ ಗೌಡರು ಕಂಡವರು. ಅದರಲ್ಲಿ ಪಾಲ್ಗೊಂಡವರು. ಸಾಲತೀರಿಸಲು ಬಡ್ಡಿಗಾಗಿ ಬತ್ತ ಅಳೆದುಅಳೆದು ಸುಸ್ತಾದದ್ದು, ಅದಕ್ಕೆ ಅವ್ವನ ತಾಳ್ಮೆ, ತುಂಬಿದ ಸಂಸಾರದ ನಾವೆಯನ್ನು ಸಾಗಿಸುತ್ತಿದ್ದ ಪರಿಗಳೆಲ್ಲವೂ ಗೌಡರನ್ನು ತಮ್ಮ ಹಿಂದಿನ ನೆನಪಿನಾಳಕ್ಕೆ ಕೊಂಡೊಯ್ಯುತ್ತವೆ. ಅವೇ ಗೌಡರ ಬದುಕಿಗೆ ಕಲಿತ ಅಕ್ಷರಕ್ಕಿಂತ ಮಿಗಿಲಾದ ದೊಡ್ಡ ಪಾಠವಾಗಿದೆ.

ಬೆಳೆಯುವ ಮಕ್ಕಳಿಗೆ ಪರಿಸರವು ಮುಖ್ಯವಾಗುತ್ತದೆ. ಅದು ಪ್ರಕೃತಿಯಾಗಿರಬಹುದು ಅಥವ ಮಾನವ ಪ್ರಕೃತಿಯಾಗಿರಬಹುದು. ಅಂತೆಯೇ ರಾಜೇಗೌಡರ ಊರು ಕಾಡಿನಿಂದ ಬಯಲಾಗುತ್ತಿತ್ತು. ಈ ಸುತ್ತಮುತ್ತಲಿನವರು ನೆರಳಿನಿಂದ ಬಿಸಿಲ ಕಡೆ ಬರುತ್ತಿದ್ದರು. ಅತ್ತಕಡೆ ಕಾಡು ಹಾಸನಪೇಟೆ ಸೇರುತ್ತಿತ್ತು. ಇತ್ತ ಸರಳ ಜೀವನ ಮಾಗುತ್ತಾ ಪೇಟೆಕಡೆ ತಲೆಹಾಕುತ್ತಿತ್ತು. ಇಂತಹ ಸಂದರ್ಭದಲ್ಲಿ ಒಂದು ಕಡೆ ಗಂಧದ ಮರಗಳನ್ನೇ ಕಡಿದು ಒಲೆಗೆ ಉರುವಲಾಗಿ ಒಮ್ಮೊಮ್ಮೆ ಉರಿಸುತ್ತಿದ್ದ ದಿನಗಳು, ಉಣ್ಣುವ ಬತ್ತ ಮಾರಿ ಗರಿಗರಿ ಬಟ್ಟೆಗಳನ್ನು ಮಾರ್‍ವಾಡಿ ಅಂಗಡಿಗಳಿಂದ ತರುತ್ತಿದ್ದ ರೀತಿಗಳು ಎರಡನ್ನೂ ಗೌಡರು ಕಂಡವರು. ಒಂದನೆಯದು ತಿಳುವಳಿಕೆ ಇಲ್ಲದ್ದಾದರೆ, ಮತ್ತೊಂದು ನಗರಕಡೆ ಮುಖ ಮಾಡಿ ನಿಂತಿದ್ದು. ಈ ಎರಡು ಮೂಲಗಳು ಪ್ರಕೃತಿಯನ್ನು, ಮಾನವ ಪ್ರಕೃತಿಯನ್ನು ತಿಂದು ಮುಕ್ಕಿಬಿಟ್ಟದುಂಟು. ಗಾಂಧಿಮಂತ್ರ, ಋಗ್ವೇದದ ಉದಾತ್ತ ಮಂತ್ರಗಳು ಈ ದೇಶದಲ್ಲಿ ಹೇಗೆ ಮೂಲೆಸೇರಿದವೋ ಹಾಗೆಯೇ ಮಸುಕಾಗುತ್ತಾ ಸಾಗಿತು ಮಾನವ ಪ್ರಕೃತಿ ಎಂಬುದು ಗೌಡರ ವಾದ.

ರಾಜೇಗೌಡರ ಎಳೆಯ ವಯಸ್ಸಿನಲ್ಲಿ ಅವರ ಮನೆಯ ಜೀತದ ಆಳೇ ಗುರು. ಅವನು ತಿದ್ದಿ ಬುದ್ಧಿಕಲಿಸಿದರೆ ಅವರ ಅಜ್ಜ ಅಪ್ಪ ಖುಷಿ

ಪಡುತ್ತಿದ್ದರು. ಕೊಟ್ಟಿಗೆಗುಡಿಸುವ ಹೊಲೆಯರ ಜವರಿ, ದನಮೇಯಿಸುವ ಹೆಣವಯ್ಯನಂತಹವರು ತಲೆಮೇಲೆ ಹೊಡೆದು ಬುದ್ಧಿಕಲಿಸುವಾಗ, ಇವರ ಅವ್ವ "ಅದು ಸರಿ" ಎನ್ನುತ್ತಿದ್ದರು. ನೇಗಿಲು ಕೆತ್ತುವ ಚಿಕ್ಕಯ್ಯ ಹರಿಜನರವನು. ಅವನು ಮನೆ ಜಗುಲಿಮೇಲೆ ಕೂರಿಸಿಕೊಂಡು ಕಥೆಕಜ್ಜಾಯ ಹೇಳುತ್ತಾ ಮಂತ್ರಮುಗ್ಧವಾಗಿಸುತ್ತಿದ್ದದ್ದು, ಗೌಡರುಗಳಿಗೆ ಉಗಿದು ಬುದ್ಧಿ ಹೇಳುತ್ತಿದ್ದ ಪರಿಯನ್ನು ನೆನೆದು ಗೌಡರು ಈಗೆಲ್ಲಿ ಹೋಯಿತು ಅಂಥಾ ಜೀವನಪರಿ ಎಂದು ಇಂದಿಗೂ ಕಳಕಳಿಸುತ್ತಾರೆ. ಗೌಡರು ತಿಳಿದಂತೆ ಅವರ ಹಳ್ಳಿಯಲ್ಲಿ ಗೌಡ ಬೇರೆ ಹೊಲೆಯ ಬೇರೆ ಎಂದು ಬದುಕಿದ ಮಾದರಿಯನ್ನೇ ನೋಡಿಲ್ಲವಂತೆ. ಹೊಲೆಯನೊಬ್ಬ ತಪ್ಪುಮಾಡಿದಾಗ ಊರೊಳಗೆ ಕರೆಸಿ ದಂಡ ಕಟ್ಟಿಸಿಕೊಂಡರೆ; ಗೌಡನೊಬ್ಬನು ತಪ್ಪುಮಾಡಿದಾಗ ಹೊಲೆಯನೊಬ್ಬ ಮೆಟ್ಟಿನಲ್ಲಿ ಹೊಡೆದು ಜಯಿಸಿಕೊಂಡ ಘಟನೆ ಇನ್ನೂ ಅವರ ನೆನಪಿನಲ್ಲಿ ಅಚ್ಚಹಸಿರಾಗಿವೆ. ಈ ವಿಚಾರಗಳನ್ನು ಭಾರತದೇಶಕ್ಕೆಲ್ಲಾ ಅಳವಡಿಸಲಾಗದಿದ್ದರೂ ಸಹಬಾಳ್ವೆಯನ್ನು ಧಿಕ್ಕರಿಸುವ ಕಾಲ ಅದಾಗಿರಲಿಲ್ಲ. ಹಾಗಾಗಿಯೇ ರಾಜೇಗೌಡರಿಗೆ ಇಂದಿಗೂ ಸಹ ಗೌಡ ಬೇರೆ, ಹೊಲೆಯ ಬೇರೆ ಅನ್ನಿಸುವುದೇ ಇಲ್ಲ. ಇದೇ ಅವರ ದೊಡ್ಡಗುಣ. ಕುವೆಂಪು ಅವರ ತತ್ವದ ಪರಿಪಾಲಕರು ಎಂಬುದು ಇಂತಹ ನಿದರ್ಶನಗಳ ಮೂಲಕ ನಮಗೆ ಸ್ಪಷ್ಟವಾಗುತ್ತವೆ. ಅಲ್ಲಿ ಗುತ್ತಿ, ಐತ, ಪೀಂಚಲು, ತಿಮ್ಮಿ ಅವರಂತೆಯೇ ಇಲ್ಲಿ ಗೌಡರಿಗೆ ಜವರಿ, ಹೆಣವಯ್ಯ, ಚಿಕ್ಕಯ್ಯರು ಪ್ರಮುಖರಾಗುತ್ತಾರೆ. ಎಲ್ಲರೂ ಮನುಷ್ಯರು ತಾನೆ! ಅವರವರ ಆಚಾರ ವಿಚಾರಗಳು ಅವರವರ ಮನೆ ಹೊಸಿಲು ದಾಟಬಾರದೆಂಬುದೇ ಗೌಡರ ತತ್ವವಾಗಿದೆ. ಇದೆಲ್ಲವನ್ನೂ ಅವರಿಗೆ ಕಲಿಸಿರುವುದು ಅವರು ಬೆಳೆದ ಪರಿಸರ.

ಗಾಡಿಹೊಡೆಯಲು ಹೇಳಿಕೊಟ್ಟ ಶೇಕ, ಗದ್ದೆ ಉಳಲು ತೋರಿಸಿಕೊಟ್ಟ ಈರ, ದನಕಾಯುವ ಹೆಣವಯ್ಯ ಹೇಳಿಕೊಟ್ಟ ಬುದ್ಧಿಮಾತುಗಳು, ಅವರಿಗೆ ಮಾಧ್ಯಮಿಕ ಶಾಲೆಯ ಗುರುಗಳ ಮಾತುಗಳಿಗಿಂತ ಯಾವೂ

ಕಡಿಮೆಯಾದವುಗಳಲ್ಲ. ಮನೆಕಟ್ಟುವಾಗ ಮರಕೊಯ್ಯಲು ಗರಗಸ ಹಿಡಿದು ಬಂದ ಯಂತ್ರಮಾನವ ಸೋಮಣ್ಣ ಮಲಬಾರು ಕಡೆಯಿಂದ ಬಂದಿದ್ದರೂ ಹತ್ತಾರು ವರ್ಷ ಇವರೊಂದಿಗೆ ಇದ್ದು ದಾಯಾದಿಗಳಂತಾದವರು. ಇವೆಲ್ಲವೂ ಪರಕೀಯತೆಯನ್ನು ತನ್ನದಾಗಿಸಿಕೊಂಡ ಪರಿ ಊರಿನಲ್ಲಿತ್ತು. ಅವರ ಅಜ್ಜ, ಅಪ್ಪನವರೊಳಗಿತ್ತು. ಆ ಮೂಲಕ ಅದು ಗೌಡರಲ್ಲಿಯೂ ಬೇರೂರಿದ್ದು ಸಹಜವೇ ಆಗಿದೆ. ಅಂತೆಯೇ ಗಾಂಧಿ ತತ್ವದಂತೆ ಹರಿಜನರನ್ನು ಗುಡಿಯೊಳಗೆ ನುಗಿಸಿದ್ದು, ತನಗೆ ಸಮನಾಗಿ ಗಾಂಧಿ ಟೊಪ್ಪಿಯನ್ನು ಚಿಕ್ಕಯ್ಯನಿಗೆ ಹಾಕಿಸಿ ಪಂಚಾಯ್ತಿಮೆಂಬರು ಮಾಡಿಸಿದ್ದು ಇವೆಲ್ಲವೂ ಅಭಿವೃದ್ಧಿ ಸಂಕೇತಗಳಲ್ಲದಿದ್ದರೂ ರಾಜೇಗೌಡರ ಅಪ್ಪನಲ್ಲಿ ಬೆರೆತುಹೋದ ಗುಣಗಳಾಗಿದ್ದವು. ಅವೇ ಗುಣಗಳು ಗೌಡರಲ್ಲಿ ಮುಂದುವರೆದಿವೆ. "ಮುಂದಿನ ಸಾಲಿನ ಹಾರು ನೇರಸಾಲು ಹೊಡೆದರೆ ಹಿಂದಿನ ಹಾರಿನ ಸಾಲು ಕೂಡ ನೇರವಾಗುತ್ತದೆ" ಎಂಬ ಗಾದೆ ಮಾತು ಗೌಡರ ಜೀವನಶೈಲಿಗೆ ತುಂಬಾ ಹತ್ತಿರವಾಗುತ್ತದೆ.

ಹೀಗೆ ಗೌಡರು ಬೆಳೆದ ರೀತಿ, ಹಳ್ಳಿಯಲ್ಲಿ ಪಡೆದ ಅನುಭವಗಳೆಲ್ಲಾ ಸೇರಿ ಮರಿದುಂಬಿಯಾಗಿ ಬದುಕನ್ನು ಹೀರಿ ಗ್ರಾಮೀಣ ಬೇಲಿಹೂವಿನಿಂದ ನಗರಾಭಿಮುಖವಾಗಿ ಹಾರಿ ಪುನಃಪುನಃ ಹಾಸನದ ಮಲೆನಾಡಿನ ಹಿಂದಿನ ನೆನಪುಗಳನ್ನೆಲ್ಲಾ ಮೆಲುಕುಹಾಕುತ್ತಾ ತೌಲನಿಕವಾಗಿ ನೋಡುತ್ತಾ ಬಂದಿರುವುದೇ ಅವರ ಸಾಹಿತ್ಯದ ಗಣಿಯಾಗಿದೆ. ಯಾವ ಬದುಕು ಸಾಹಿತ್ಯವಾಗುತ್ತದೋ ಅದು ಸಮಕಾಲೀನತೆಯೊಂದಿಗೆ ಸ್ಪಂದಿಸುತ್ತಾ ಸಾಗುತ್ತದೆ. ಅದೇ ಸಾಹಿತ್ಯದ ಮೌಲಿಕ ಅಂಶವೂ ಕೂಡ ಆಗಿರುತ್ತದೆ. ಅದು ಸದಾ ಕಾಲ ಸಾರ್ವಕಾಲಿಕಮೌಲ್ಯವೂ ಕೂಡ ಆಗಿ ಸಮಾಜದೊಂದಿಗೆ ಮುಖಾಮುಖಿಯಾಗಿ ಸಾಗುತ್ತದೆ. ಅಂತಹ ವಿಶಿಷ್ಟತೆ ರಾಜೇಗೌಡರ ಕೃತಿಯೊಳಗೆ ಅಡಗಿದ್ದು ಅದರ ಕಿರುನೋಟವನ್ನು ತೋರಿಸುವುದೇ ಮುಂದಿನ ಹೆಜ್ಜೆಯಾಗಿದೆ.

ರಾಜೇಗೌಡರು ಓದುವ ಸಂದರ್ಭದಲ್ಲಿಯೇ ಜಾನಪದದ ಬಗ್ಗೆ ವಿಶೇಷ ಆಸಕ್ತಿಬೆಳೆಸಿಕೊಂಡಿದ್ದವರು. ಎಂ.ಎ. ಅಧ್ಯಯನದ ಅವಧಿಯಲ್ಲಿ

ದೊರೆತ ಮೂರು ನೂರು ರೂಪಾಯಿಗಳ ಸ್ಕಾಲರ್‌ಷಿಪ್ ಹಣದಿಂದ ತಾವು ಸಗ್ರಹಿಸಿದ್ದ "ಸತ್ಯಭೋಜರಾಜ" ಎಂಬ ಕೃತಿಯನ್ನು ಪ್ರಕಟಿಸಿದ್ದು, ಗೌಡರಿಗೆ ಜಾನಪದದ ಬಗ್ಗೆ ಇದ್ದ ಅಪಾರವಾದ ಪ್ರೀತಿಯನ್ನು ತೋರಿಸುತ್ತದೆ. ಅವರು ಎಂ.ಎ. ಓದುವುದು ಕಾಲೇಜು ಅಧ್ಯಾಪಕನಾಗಲು ಎಂಬ ತಿಳುವಳಿಕೆ ಮಾತ್ರ ಇತ್ತು. ಕೆ.ಪಿ.ಎಸ್.ಸಿ.ಯಿಂದ ಕಾಲೇಜು ಅಧ್ಯಾಪಕ ವೃತ್ತಿಗೆ ಇಂಟರ್‌ವ್ಯೂ ಕೂಡ ಬಂದಿತು. ಆಗ ವಿರೋಧ ಪಕ್ಷದ ನಾಯಕರಾಗಿದ್ದ ಶ್ರೀ ಹೆಚ್.ಡಿ. ದೇವೇಗೌಡರಿಂದ ಶಿಫಾರಸ್ಸು ಪತ್ರ ಪಡೆದು ಕೆ.ಪಿ.ಎಸ್.ಸಿ. ಸದಸ್ಯರಾಗಿದ್ದ ಶ್ರೀ ಎಚ್.ಎಲ್. ನಾಗೇಗೌಡರಿಗೆ ಕೊಟ್ಟಾಗ ನಾನು ಲೆಕ್ಚರರ್ ಆಗಿಯೇಬಿಟ್ಟೆ ಎಂದು ಕನಸುಕಾಣುತ್ತಿದ್ದಾಗ, ಆ ಪತ್ರವನ್ನು ಗೌಡರ ಕರೀಕೋಟು ತಣ್ಣಗೆ ನುಂಗಿಬಿಟ್ಟಿತು. ನನ್ನನ್ನು ಕ್ಯಾರೇ ಅನ್ನಲಿಲ್ಲ ಎಂಬುದು ಗೌಡರ ಅಳಲು. ಆದರೆ ಅದೇ ನಾಗೇಗೌಡರು ಅವರಲ್ಲಿದ್ದ ಜಾನಪದದ ಆಸಕ್ತಿಯನ್ನು ಮುಂದೊಂದು ದಿನ ಗುರುತಿಸುತ್ತಾರೆ ಎಂಬುದು ಆಗ ರಾಜೇಗೌಡರಿಗೆ ತಿಳಿದಿರಲಿಲ್ಲ.

ಯಾವುದೇ ಕೆಲಸವಿಲ್ಲದೆ, ತಾನು ಎಂ.ಎ. ಓದಿದವ, ಡಬಲ್ ಗ್ರಾಜುಯೇಟ್ ಎಂಬ ಯಾವುದೇ ಹಮ್ಮುಬಿಮ್ಮುಗಳಿಲ್ಲದೆ ಊರಿಗೆ ಹಿಂತಿರುಗಿ ಗದ್ದೆ ಉಳುತ್ತಿದ್ದಾಗ, "ಜಾನಪದ ಸಂಗ್ರಹ" ವನ್ನು ಸಾಹಿತ್ಯ ಪರಿಷತ್ತು ಕೈಗೆತ್ತಿಕೊಂಡು ಅರ್ಜಿಕರೆದಾಗ ಅಲ್ಲಿಗೆ ಹೋದರು. ಜಾನಪದದ ಕೆಲಸ ಜಿ. ನಾರಾಯಣ ಅವರ ಸಾರಥ್ಯದಲ್ಲಿ ನಾಗೇಗೌಡರ ಜೋಡಿಯಲ್ಲಿ ನಡೆಯುತ್ತಿತ್ತು. ಆ ಸಂದರ್ಭದಲ್ಲಿಯೇ ಇವರಿಗೆ ಕೆ.ಪಿ.ಎಸ್.ಸಿ.ಯಿಂದ ಉಪನೋಂದಣಾಧಿಕಾರಿಯ ಹುದ್ದೆಗೆ ಇಂಟರ್‌ವ್ಯೂ ಬಂದಿತು. ಆಗ ಜಿ. ನಾರಾಯಣ ಅವರು ಹಿಂದುಮುಂದು ನೋಡುತ್ತಲೇ ಇನ್‌ಫ್ಲುಯೆನ್ಸ್ ಮಾಡಲು ಬಂದರೂ ಅದನ್ನೇ ಪೂರ್ಣವಾಗಿ ನಂಬಿಕೊಳ್ಳದೆ, ಹಿಂದಿನ ಅನುಭವದ ಎಚ್ಚರಿಕೆಯಿಂದ, ತಾವು ಓದುವಾಗ ಪ್ರಕಟಿಸಿದ್ದ "ಸತ್ಯಭೋಜರಾಜ" ಎಂಬ ಪುಸ್ತಕವನ್ನು ನಾಗೇಗೌಡರ ಕೈಗೆ ಇಂಟರ್‌ವ್ಯೂ ಸಂದರ್ಭದಲ್ಲಿ ಇಟ್ಟಾಗ

ನಾಗೇಗೌಡರು ಪುಸ್ತಕ ನೋಡುತ್ತಾ, ಅವರನ್ನು ಅಡಿಯಿಂದ ಮುಡಿಯವರೆಗೂ ಕಿರುಗಣ್ಣಿನಿಂದಲೇ ಅಳೆದು ತೂಗಿ ನೋಡಿದರಂತೆ. ರಾಜೇಗೌಡರೇ ಹೇಳುವಂತೆ "ಹುಡುಗನಿಗೆ ಕೆಲಸಕೊಟ್ಟು ಜಾನಪದ ಹೊಲಗೆಯ್ಯಿಸಿಕೊಳ್ಳಬಹುದೆನಿಸಿತೋ ಏನೋ; ನೋಡೋಣ; ಎಂದರು. ಮುಂದೆ ನಾನೂ ಬದುಕಿದೆ. ಬದುಕಿನಲ್ಲಿ ಅವರು ಉಳುವ ಹೊಲವನ್ನು ಮನಸ್ಸಿಟ್ಟು ಉಳುತ್ತಾ ಹೋದೆ. ಹೂವಿನೊಡನೆ ನಾರೂ ಸ್ವರ್ಗಸೇರುವುದು ಹೀಗಲ್ಲವೆ!" (ಮಲೆನಾಡ ಸೆರಗಲ್ಲಿ ನಿಂತು) ಎಂದು ಕೆಲಸ ಪಡೆದ ಅನುಭವವನ್ನು ಹೀಗೆ ಹೇಳಿಕೊಂಡಿದ್ದಾರೆ.

ನಾಗೇಗೌಡರಂತೆಯೇ ರಾಜೇಗೌಡರೂ ಕೂಡ ಸರ್ಕಾರಿ ಅಧಿಕಾರಿಯಾಗಿದ್ದುಕೊಂಡೇ ತಮ್ಮ ಜಾನಪದಕಾಯಕವನ್ನು ಮುಂದುವರೆಸಿದರು. ನಾಗೇಗೌಡರ ಒಡನಾಟ ಇನ್ನೂ ಹೆಚ್ಚಾಯಿತು. ನಾಗೇಗೌಡರು ಸ್ಥಾಪಿಸಿದ ಕರ್ನಾಟಕ ಜಾನಪದ ಪರಿಷತ್ತಿಗೆ ರಾಜೇಗೌಡರನ್ನು ಕೇಳದೆಯೇ ಟ್ರಸ್ಟಿಯಾಗಿ ನೇಮಿಸಿಕೊಂಡರು. ಇವರು ಬರೆಯುತ್ತಿದ್ದ ಗದ್ಯಬರಹದ ಬಗ್ಗೆ ಯಾವಾಗಲೂ ಮೆಚ್ಚಿಗೆಸೂಚಿಸುತ್ತಿದ್ದ ನಾಗೇಗೌಡರು, ಪರಿಷತ್ತಿನ ಮೂಲಕ ಹೊರತರುತ್ತಿದ್ದ 'ಜಾನಪದ ಜಗತ್ತು' ಸಂಚಿಕೆಗೆ ಲೇಖನಗಳನ್ನು ರಾಜೇಗೌಡರಿಂದ ಬರೆಸುತ್ತಿದ್ದರು. ಆ ಬರಹದ ಮೂಲಕವೇ ರಾಜೇಗೌಡರು ಜಾನಪದತಜ್ಞರಾಗಿ ರೂಪುಗೊಳ್ಳುತ್ತಾ ಬಂದರು. ನಾಗೇಗೌಡರು 'ಸಿರಿಗಂಧ' ಕಲ್ಪನೆ ಮೂಡಿಸಿಕೊಂಡು ಚಿತ್ರೀಕರಣಕ್ಕೆ ಹೊರಟ್ಟಿದ್ದೂ ಕೂಡ ರಾಜೇಗೌಡರ ಊರಾದ ಹೊಸಹಳ್ಳಿಯಿಂದಲೇ. ಉದೇವಾರದ ಮನೆ, ಕಾಸರವಳ್ಳಿ ಮನೆ, ಸೀರ್ನಾಳಿ ಮನೆಗಳನ್ನು ರಾಜೇಗೌಡರು ತೋರಿಸಿದಾಗ, ನಾಗೇಗೌಡರಿಂದ ಹೊರಟ ಉದ್ಗಾರ ಅಯ್ಯೋ ದೇವರೇ! ಇವು ಅಮೆರಿಕಾದಲ್ಲಿದ್ದಿದ್ದರೆ ಗ್ಲಾಸ್‌ಹೌಸ್ ಮಾಡಿ ಇಡುತ್ತಿದ್ದರು ಎಂಬುದು. ಹೀಗೆ ನಾಗೇಗೌಡರ ದಾರಿಯಲ್ಲಿಯೇ ಸಾಗಿದರು ರಾಜೇಗೌಡರು. ನಾಗೇಗೌಡರು 'ಹೊಲಕ್ಕೆಲ್ಲ ಬಿತ್ತಿದ ಹೊನ್ನನ್ನು' ಬೆಳೆಯಾಗಿ ಬೆಳೆಯುತ್ತಾ ಹೋಗುವುದೇ ರಾಜೇಗೌಡರ ಕಾಯಕವಾಯಿತು. ಅಂದಿನಿಂದ ಪ್ರಾರಂಭವಾದ ಗೌಡರ

ಬರಹ, ಅಧ್ಯಯನ, ಸಂಗ್ರಹ ನಿರಂತರವಾಗಿ ಇಂದಿಗೂ ಮುಂದುವರೆಯುತ್ತಿರುವುದು, ಅವರ ಸೃಜನಶೀಲತೆ ಚಲನಶೀಲತೆಯಾಗಿರುವುದು ನಿಜವಾದ ಜಾನಪದವೇ ಆಗಿದೆ.

ಮುಂದೆ ರಾಜೇಗೌಡರು ನೋಂದಣಿ ಮತ್ತು ಮುದ್ರಾಂಕ ಇಲಾಖೆಯಲ್ಲಿ ಕೆಲಸಮಾಡುತ್ತಲೇ ತಮ್ಮ ಸುತ್ತಮುತ್ತಲಿನ ಜಗತ್ತಿನ ಆಗುಹೋಗುಗಳನ್ನು ಗಮನಿಸುತ್ತಲೇ ಅವುಗಳನ್ನು ಬರಹದ ಮೂಲಕ ಹೊರಗೆಡುವುತ್ತಾ, ಚರ್ಚಿಸುತ್ತಾ, ಅನುಸಂಧಾನಕ್ಕೆ ಒಳಪಡಿಸುತ್ತಾ ಸಾಗಿದುದು ಸಾಹಿತ್ಯ ಲೋಕಕ್ಕೆ ಒಂದು ದೊಡ್ಡ ಕೊಡುಗೆಯೇ ಆಯಿತು. ಇಂತಹ ಕಾಲದಲ್ಲಿಯೇ ಲೋಕದ ಏಳು-ಬೀಳುಗಳನ್ನು ಕಂಡಂತೆಯೇ ತಮ್ಮ ಬದುಕಿನಲ್ಲಿಯೂ ಕೂಡ ಏಳು-ಬೀಳುಗಳನ್ನು ಕಾಣುವಂತಾಯಿತು. ತಮ್ಮ ಸಾಂಸಾರಿಕ ಜೀವನದ ರಥದ ಎರಡು ಗಾಲಿಗಳಲ್ಲಿ ಒಂದಾಗಿದ್ದ ತಮ್ಮ ಪ್ರೀತಿಯ ಮಡದಿ ಯಶೋಧರಾ ಅಗಲಿದಾಗ ಆದ ನೋವು ಅಷ್ಟಿಷ್ಟಲ್ಲ. ಆದರೂ ಎದೆಗುಂದದೆ, ಮತ್ತೊಂದು ಹೆಣ್ಣಿನೊಡನೆ ಸಾಂಸಾರಿಕ ಜೀವನ ನಡೆಸಲು ಮನಸೊಪ್ಪದೆ, ತನ್ನೆದುರಿಗೆ ಮಡದಿ ಇಲ್ಲದಿದ್ದರೂ ತನ್ನೊಳಗೆ ಸದಾ ಇರುವಳೆಂದು ಭಾವಿಸುತ್ತಾ ಸಾಂಸಾರಿಕ ನೊಗವನ್ನು ಒಂಟಿಯಾಗಿ ಹೊತ್ತು ಬದುಕುಸಾಗಿಸಿದರು. ಇದು ಎಲ್ಲರಿಂದಲೂ ಆಗುವಂತಹದ್ದಲ್ಲ. ದೃಢಮನಸ್ಸಿನ ಸಾತ್ವಿಕರಿಗೆ ಮಾತ್ರ ಸಾಧ್ಯ. ಅವರೇ ಒಂದು ಕಡೆ ಹೇಳುವಂತೆ "ದಾಂಪತ್ಯವೆನ್ನುವುದು ಶಿವಶಿವೆಯರ ಅದ್ವಯ ಸ್ವರೂಪ. ನನ್ನೊಳಗಿನ ಶಿವೆ ಕಳಚಿದರೇನು! ಒಳಗೆಲ್ಲಾ ಆವರಿಸಿರುವ ಆಕೆಯೂ ಖುಷಿ ಪಡುತ್ತಿದ್ದಿರಬೇಕು!" ಇದೇ ಅವರ ಬದುಕಿನ ಆಶಯ. ಅಂತಹ ಸಾತ್ವಿಕ, ಸರಳ, ಸಜ್ಜನಿಕೆಯ ಅಪರಂಜಿಯಂತಹ ವ್ಯಕ್ತಿತ್ವ ರಾಜೇಗೌಡರದು. ಗೌಡರು ಇದೇ ಇಲಾಖೆಯಲ್ಲಿ, ಜಿಲ್ಲಾ ನೋಂದಣಾಧಿಕಾರಿಯಾಗಿ ೨೦೦೬ರಲ್ಲಿ ಸ್ವಯಂ ನಿವೃತ್ತಿ ಪಡೆದು, ತಮ್ಮ ಇಬ್ಬರು ಗಂಡುಮಕ್ಕಳೊಂದಿಗೆ ಬೆಂಗಳೂರಿನಲ್ಲಿ ವಿಶ್ರಾಂತಿ ಜೀವನ ನಡೆಸುತ್ತಿದ್ದಾರೆ. ಆದರೆ ವೃತ್ತಿಯಿಂದ ಮಾತ್ರ ನಿವೃತ್ತಿ.

ಪ್ರವೃತ್ತಿಯಿಂದ ತಮ್ಮ ಬರವಣಿಗೆ ಸಾಗುತ್ತಾ ಇದ್ದು ಮಲೆನಾಡಿನ ಪರಿಸರದ ಚಿತ್ರಣವನ್ನೊಳಗೊಂಡಂತೆ ಒಂದು ಕಾದಂಬರಿಯನ್ನು ಬರೆಯುತ್ತಿದ್ದಾರೆ. ಜೊತೆಗೆ ತಮ್ಮ ವೃತ್ತಿಯೊಂದಿಗೆ ಕೃಷಿಯನ್ನೂ ಸಹ ಮಾಡುತ್ತಾ ಬಂದಿರುವ ಗೌಡರು ಇಂದಿಗೂ ಅದನ್ನು ಕೂಡ ಮುಂದುವರಿಸುತ್ತಿದ್ದಾರೆ.

ರಾಜೇಗೌಡರು ಸಾಹಿತ್ಯ ಮತ್ತು ಜಾನಪದ ಕ್ಷೇತ್ರದ ಸಾಧನೆಗಾಗಿ ಹಲವಾರು ಗೌರವಗಳು ದೊರೆತಿವೆ. ಅವುಗಳೆಂದರೆ ೧೯೯೮ರಲ್ಲಿ ಆಲೂರು ತಾಲ್ಲೂಕಿನ ಪ್ರಥಮ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ. ೨೦೦೩ರಲ್ಲಿ ಹಾಸನ ಜಿಲ್ಲಾ ಕನ್ನಡ ರಾಜ್ಯೋತ್ಸವ ಪ್ರಶಸ್ತಿ. ೨೦೦೮ರಲ್ಲಿ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯ ಬೆಳ್ಳಿಹಬ್ಬದಲ್ಲಿ ಸನ್ಮಾನ. ಇವುಗಳೊಂದಿಗೆ ಹಲವಾರು ಸಂಘಸಂಸ್ಥೆಗಳು ಸನ್ಮಾನಿಸಿ ಗೌರವಿಸಿವೆ. ಅವರು ಹಲವಾರು ವಿಚಾರ ಸಂಕಿರಣಗಳಲ್ಲಿ ಜಾನಪದಕ್ಕೆ ಸಂಬಂಧಿಸಿದಂತೆ ಪ್ರಬಂಧಗಳನ್ನು ಮಂಡಿಸಿದ್ದಾರೆ. ವಿಶ್ವಕನ್ನಡ ಸಮ್ಮೇಳನದಲ್ಲಿಯೂ ಭಾಗವಹಿಸಿದ್ದಾರೆ. ಅವರ 'ಮಗನ ತಿಂದ ಮಾರಾಯನ ದುರ್ಗ' ಕೃತಿಗೆ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯ ಪುಸ್ತಕ ಬಹುಮಾನ ಬಂದಿದೆ. ಕರ್ನಾಟಕ ಜಾನಪದ ಪರಿಷತ್ತು ಮತ್ತು ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯ ಹಲವಾರು ಕಾರ್ಯಕ್ರಮಗಳಲ್ಲಿ ಸಂಪನ್ಮೂಲ ವ್ಯಕ್ತಿಯಾಗಿದ್ದಾರೆ. ಗೌಡರ ಕೃತಿಗಳೆಂದರೆ ೧) ಸತ್ಯ ಭೋಜರಾಜ (ಜನಪದ ಕಥನ, ೧೯೭೪) ೨) ಮಗನ ತಿಂದ ಮಾರಾಯನ ದುರ್ಗ (ಲೇಖನಗಳ ಸಂಗ್ರಹ, ೧೯೮೯) ೩) ಕೋಳಿ ಮತ್ತು ತುಳಿಸಿಕಟ್ಟೆ (ಸಣ್ಣಕತೆಗಳು, ೧೯೯೫) ೪) ಅಕ್ಕಯ್ಯಮ್ಮನ ಸಂಸಾರ (ನೀಳ್ಗತೆಗಳು, ೧೯೯೯) ೫) ಜಾನಪದ ಸಂಕಥನ (ಜಾನಪದ ವೈಚಾರಿಕ ಲೇಖನಗಳು, ೧೯೯೯) ೬) ತಾಳಬಂದೋ ತಂಬೂರಿ ಬಂದೋ (ಸಂಶೋಧನೆ) ೨೦೦೧, ೭) ಮಲೆನಾಡಿನ ಸೆರಗಲ್ಲಿ ನಿಂತು (ಲೇಖನಗಳು, ೨೦೦೬) ೮) ನೋಂದಣಿ ಕೈಪಿಡಿ (ಕಾನೂನು ತಿಳುವಳಿಕೆ, ೨೦೦೩) ಇವಲ್ಲದೆ ಇವರ ಹಲವಾರು ಲೇಖನಗಳು ಜಾನಪದ ಜಗತ್ತು,

ಜಾನಪದ ಗಂಗೋತ್ರಿ, ಹಾಗೂ ವಿವಿಧ ಸಂಚಿಕೆ, ಕೃತಿಗಳಲ್ಲಿ ಮತ್ತು ನಾಡಿನ ಹಲವಾರು ದಿನಪತ್ರಿಕೆಗಳಲ್ಲಿ ಪ್ರಕಟವಾಗಿವೆ. ಪ್ರಸ್ತುತ ಕರ್ನಾಟಕ ಜಾನಪದ ಪರಿಷತ್ತಿನ ಸದಸ್ಯ ಟ್ರಸ್ಟಿಯಾಗಿ ಕೆಲಸಮಾಡುತ್ತಿದ್ದಾರೆ. ಅವರ ಜಾನಪದ ಬರಹ ನಿರಂತರವಾಗಿ ಮುಂದುವರಿಯುತ್ತಿದೆ.

ಕರ್ನಾಟಕ ಜಾನಪದ ವಿದ್ವಾಂಸರನ್ನು ಮೂರು ವರ್ಗಗಳಾಗಿ ವಿಂಗಡಿಸಿಕೊಳ್ಳಬಹುದು.

೧) ದೇಶೀ ಪುನರಭಿವೃದ್ಧಿವಾದಕರು ೨) ಪಾಶ್ಚಾತ್ಯ ಪ್ರಭಾವ ಚಿಂತಕರು ೩) ಸಮಾಜವಾದಿ ಮತ್ತು ದೇಶೀಅನನ್ಯತೆಯ ಚಿಂತಕರು

ಈ ಮೇಲಿನ ಮೂರನೆಯ ವರ್ಗಕ್ಕೆ ರಾಜೇಗೌಡರು ಸೇರುತ್ತಾರೆ. ಸ್ವಾತಂತ್ರ್ಯ ಪೂರ್ವದಲ್ಲಿ ಜಾನಪದ ಸಂಗ್ರಹ ಮತ್ತು ಅಧ್ಯಯನ ದೇಶೀಯ ಹೆಸರಿನಲ್ಲಿ ಬ್ರಿಟಿಷ್ ವಸಹತುಶಾಹಿಯ ವಿರೋಧಿ ನೆಲೆಯಿಂದ ಹುಟ್ಟಿಕೊಂಡಿತು. ಸ್ವಾತಂತ್ರ್ಯನಂತರ ಅದು ಜನಸಂಸ್ಕೃತಿ, ಜನಪದ ಸಂಸ್ಕೃತಿಯಾಗಿ ಉಳಿದು ಬಂದಿತು. ಇತ್ತೀಚೆಗೆ ಜಾನಪದವನ್ನು ಸಮಾಜವಾದದ ಹಿನ್ನೆಲೆಯಲ್ಲಿ ಮತ್ತು ದೇಶೀಅನನ್ಯತೆಯ ದೃಷ್ಟಿಯಿಂದ ನೋಡುವ ಚಿಂತಕರು ಬಂದರು. ಅವರುಗಳೆಂದರೆ ಡಾ.ಹಿ.ಶಿ. ರಾಮಚಂದ್ರೇಗೌಡರು, ಡಾ. ರಾಜೇಗೌಡಹೊಸಹಳ್ಳಿ, ಡಾ. ಬಿ.ಎ. ವಿವೇಕ ರೈ, ಡಾ.ಟಿ.ಎಸ್. ಸತ್ಯನಾಥ್, ಡಾ. ಚಕ್ಕೆರೆ ಶಿವಶಂಕರ್, ಡಾ. ತೀ.ನಂ. ಶಂಕರನಾರಾಯಣ, ಡಾ. ಕೆ. ಆರ್. ಸಂಧ್ಯಾರೆಡ್ಡಿ ಮುಂತಾದವರು. ಈ ಹಿನ್ನೆಲೆಯಲ್ಲಿಯೇ ರಾಜೇಗೌಡರ ಬರಹವನ್ನು ಕಾಣಬಹುದು.

ಸತ್ಯ ಭೋಜರಾಜ : ವಾಸ್ತವ ಜೀವನಾನುಭವವೊಂದು ಅತಿಮಾನುಷ ವಿಷಯಗಳ ಜೊತೆ ಸಂಕರ್ಷಗೊಳ್ಳುವುದೇ ಈ ಕೃತಿಯ ವೈಶಿಷ್ಟ್ಯವಾಗಿದೆ. ಈ ಕಾವ್ಯದಲ್ಲಿ ಎರಡೆರಡು ಸಾಲುಗಳು ಒಂದೊಂದು ಘಟಕವಾಗಿ ನಿಲ್ಲುತ್ತಾ ಮುಂದಿನ ಸಾಲುಗಳಿಗೆ ಸಂಪರ್ಕಕಲ್ಪಿಸುತ್ತಾ ಸಾಗುವುದರಿಂದ ರಗಳೆಯ ರೂಪವನ್ನು ಪಡೆದುಕೊಳ್ಳುತ್ತದೆ. ಜೊತೆಗೆ ಲೌಕಿಕ ವೃತ್ತಿಗಾಯಕರಾದ

ದೊಂಬಿದಾಸರ ಸಂಪ್ರದಾಯಕ್ಕೆ ಸೇರಿದ್ದು, ವಿಶೇಷ ಕಥನದಿಂದಾಗಿ ಮತ್ತು ಉಲ್ಲೇಖನೀಯದಿಂದಾಗಿ ಇದೊಂದು ಉತ್ತಮ ಕಿರುಕಾವ್ಯ ಎಂಬುದರಲ್ಲಿ ಅತಿಶಯೋಕ್ತಿಯೇನೂ ಇಲ್ಲ. ಕೃತಿಯ ಶೀರ್ಷಿಕೆ ಸತ್ಯಭೋಜರಾಜ. ಅವನೇ ಕಥೆಯ ನಾಯಕ. ಆದರೂ ಅವನ ಪಾತ್ರ ಅಂತಹ ಮಹತ್ವವನ್ನು ಪಡೆದುಕೊಂಡಿಲ್ಲ. ಇಲ್ಲಿ ಪ್ರಮುಖ ವ್ಯಕ್ತಿ ಸಂಕಲ್ಪ ರಾಜನಾದರೆ, ಅವನ ತಂಗಿ ಪ್ರಭಾವತಿಯೇ ನಾಯಕಿ.

ಸಂಕಲ್ಪ ಪಟ್ಟಣದ ರಾಜನಿಗೆ ಮಹಾಲಕ್ಷ್ಮೀ ಮಡದಿ. ಮದುವೆಯಾಗಿ ಅರವತ್ತು ವರ್ಷವಾದರೂ ಮಕ್ಕಳಾಗದಿದ್ದಾಗ ಶಿವನು ಗಂಡುಮಗು ವರ ನೀಡಿದಾಗ ರಾಣಿ ಹೆಣ್ಣುಮಗು ಬೇಡುತ್ತಾಳೆ. ಇದು ಅಪರೂಪದ ಬೇಡಿಕೆ. ಹೆಣ್ಣುಮಗುವೇ ಕಥೆಗೆ ಚಾಲನೆಯಾಗಿ ಹೆಣ್ಣುಹುಟ್ಟಿದ ಮೂರುವರ್ಷಕ್ಕೆ ತಂದೆ ತಾಯಿ ಸಾಯುತ್ತಾರೆ. ಈ ಮಕ್ಕಳನ್ನು ಸಾಕಲು ಗುರುರಾಯ ಬರುತ್ತಾನೆ. ಸಂಕಲ್ಪ ರಾಜನಿಗೆ ರತ್ನಗನ್ನೆಯನ್ನು ಮದುವೆಮಾಡುತ್ತಾನೆ. ಸಂಕಲ್ಪರಾಜನ ತಂಗಿ ಪ್ರಭಾವತಿಯನ್ನು ಸತ್ಯಭೋಜರಾಜನಿಗೆ ವಿವಾಹಮಾಡುತ್ತಾನೆ. ಮುಂದೆ ಕಥೆ ಹೊಸತಿರುವನ್ನು ಪಡೆದುಕೊಳ್ಳುತ್ತದೆ. ಸತ್ಯಭೋಜರಾಜನ ಪಟ್ಟಣಕ್ಕೆ ಬರಗಾಲ ಬಂದು ಮಕ್ಕಳನ್ನಾದರೂ ತಿಂದು ಬದುಕುವ ಹಸಿವಿನ ತೀವ್ರ ಕರುಳು ಹಿಂಡುವ ಪ್ರಸಂಗ ಮುದುಕಿಯ ಮೂಲಕ ತಿಳಿದಾಗ ರಾಜ ಸತ್ಯಭೋಜರಾಜ ಮತ್ತು ಅವನ ಹೆಂಡತಿ ಪ್ರಭಾವತಿ ಮಕ್ಕಳು ಸಹಿತ ರಾತ್ರಿ ಯಾರೂ ಕಾಣದಂತೆ ಕಾಡಿಗೆಬಂದು ಬೇರೆಯಾಗುತ್ತಾರೆ. ಆಗ ಪ್ರಭಾವತಿ ಅಣ್ಣನನ್ನು ಹುಡುಕಿಕೊಂಡು ಅಣ್ಣನ ಪಟ್ಟಣಕ್ಕೆ ಬಂದಾಗ ಅತ್ತಿಗೆ ರತ್ನಗನ್ನೆ ಕ್ರೂರತನದಿಂದ ವರ್ತಿಸುತ್ತಾಳೆ. ಗುರುವಿನೊಡನೆ ಸೇರಿ ನಾದಿನಿ ಮತ್ತು ಮಕ್ಕಳಿಗೆ ವಿಷದ ಕಜ್ಜಾಯ ಕೊಡುವುದನ್ನು ರತ್ನಗನ್ನೆ ತಮ್ಮ ರಣಧೀರ ತಪ್ಪಿಸುತ್ತಾನೆ. ಇಲ್ಲಿ ರತ್ನಗನ್ನೆಯದು ಹುಟ್ಟು ಕ್ರೌರ್ಯವಾದರೆ, ರಣಧೀರನದು ಮಾನವೀಯ ಅಂತಃಕರಣದ ಸೆಲೆಯಾಗುತ್ತಾನೆ. ಮುಂದೆ ಸಂಕಲ್ಪರಾಜ ಬರುವುದು, ಶಿವನನ್ನು ಬೇಡಿ ಅವರೆಲ್ಲರನ್ನೂ ಬದುಕಿಸಿಕೊಳ್ಳುವುದು ಇದೇ

ಕಥಾ ವಸ್ತು. ಇವೆಲ್ಲವೂ ಕಥೆಯನ್ನು ಉತ್ಕಟತೆಗೆ ಒಯ್ದು ದುಃಖವನ್ನು ತೀವ್ರಗೊಳಿಸಿದರೂ ಕಥೆ ಸುಖಾಂತವಾಗುವುದು, ಜನಪದ ಕಥೆಯ ಆಶಯವೇ ಆಗಿದೆ. ಕಾವ್ಯದ ಕೊನೆಯಲ್ಲಿ "ಅಣ್ಣನ ವಂಶ ಉಳಿಯಲಿ, ಅಣ್ಣನ ವಂಶ ಬೆಳೆಯಲಿ" ಎಂದು ತಂಗಿ ಹಾರೈಸುವುದು ಕಾವ್ಯದಲ್ಲಿ ಸುಪ್ತವಾಗಿರುವ ಮೂಲಧರ್ಮವನ್ನೇ ಸಾರಿಹೇಳುತ್ತದೆ. ಈ ಕೃತಿ ಕಲೆಗಾರಿಕೆಯಿಂದಲ್ಲದಿದ್ದರೂ ಕಥೆಗಾರಿಕೆಯಿಂದ ಉತ್ತಮಕೃತಿಯಾಗಿದೆ. "ಇಂತಹ ಗಮನಾರ್ಹ ಕಾವ್ಯವೊಂದನ್ನು ದೊರಕಿಸಿಕೊಟ್ಟು ರಾಜೇಗೌಡರು ಒಳ್ಳೆಯ ಕೆಲಸವನ್ನು ಮಾಡಿದ್ದಾರೆ. ಜಾನಪದ ಸಂಬಂಧವಾಗಿ ಅವರು ಇರಿಸಕೊಂಡಿರುವ ಶ್ರದ್ಧಾನುರಕ್ತಿ ಮತ್ತು ಕಾರ್ಯತತ್ಪರತೆಗಳು ಅಭಿನಂದನೀಯವಾಗಿದೆ" ಎಂಬ ರಾ.ಗೌ. ಅವರ ಮಾತುಗಳು (ಇದೇ ಕೃತಿ ಮುನ್ನುಡಿ) ರಾಜೇಗೌಡರ ಕೆಲಸದ ಸಾರ್ಥಕತೆಯನ್ನು ಹೆಚ್ಚಿಸಿವೆ. ವ್ಯಾಸಂಗದ ಅವಧಿಯಲ್ಲಿಯೇ ಇಂತಹ ಪ್ರಾರಂಭದ ಹೆಜ್ಜೆಯನ್ನಿಟ್ಟ ಗೌಡರ ಸಾಹಸ ಹಾಗೂ ಆಸಕ್ತಿಗೆ ನಿಜವಾದ ಅಭಿನಂದನೆಗಳು ಸಲ್ಲಲೇಬೇಕಾಗುತ್ತವೆ.

ಮಗನತಿಂದ ಮಾರಾಯನ ದುರ್ಗ : ಈ ಕೃತಿ ಹತ್ತು ಲೇಖನಗಳನ್ನು ಒಳಗೊಂಡಿದ್ದು, ಇಲ್ಲಿಯ ಒಂದೊಂದು ಲೇಖನಗಳನ್ನು ಗಮನಿಸಿದಾಗ ಜಾನಪದ ಮತ್ತು ಸೃಜನಶೀಲ ಕಥಾನಕಗಳ ನಡುವೆ ವ್ಯತ್ಯಾಸವಿದ್ದಂತೆ ಕಾಣುವುದಿಲ್ಲ. ಸೂಕ್ಷ್ಮಾವಲೋಕನದ ಜಾನಪದತಜ್ಞನ ಕೆಲಸ ಇಲ್ಲಿ ಸಮರ್ಥವಾಗಿ ಕೆಲಸನಿರ್ವಹಿಸಿರುವುದನ್ನು ಕಾಣಬಹುದು. ಇದಕ್ಕೆ ಕಾರಣವೆಂದರೆ ರಾಜೇಗೌಡರು ಹಳ್ಳಿ ಮತ್ತು ನಗರ ಎರಡನ್ನೂ ಸೂಕ್ಷ್ಮಾವಲೋಕನ ಮಾಡಿದವರು. ಆದ್ದರಿಂದ ಎರಡು ಸಂಸ್ಕೃತಿಗಳ ಭಾಷೆ ಮತ್ತು ವಸ್ತು ಇಲ್ಲಿ ಸಮರ್ಥವಾಗಿ ಗೌಡರನ್ನೇ ದುಡಿಸಿಕೊಂಡಿವೆ. ಗೌಡರಿಗೆ ಕೋವಿಪೇಟೆ ದುರ್ಗಮ್ಮ ಎಷ್ಟು ಮುಖ್ಯಳಾಗುತ್ತಾಳೋ ಅಷ್ಟೇ ಮುಖ್ಯಳಾಗುತ್ತಾಳೆ ಕಣತೂರಮ್ಮನೂ ಕೂಡ.

ಹಾಸನ ಜಿಲ್ಲೆಯ ಜನಪದ ಕಲೆಗಳ ಬಗ್ಗೆ ಹೇಳುತ್ತಾ 'ಜಾನಪದ ನಿರಂತರ ಜೀವಂತ' ವೆನ್ನುವುದು ಸರಿ. ಆದರೆ ಕಲೆಗಳು ಒಂದು ಘಟ್ಟ ತಲುಪಿ ನಿಂತಾಗ ಆಧುನಿಕ ನಾಗರಿಕತೆ ಅವುಗಳ ಮೇಲೆ ಸವಾರಿಮಾಡಿ ನಿರ್ನಾಮ ಮಾಡಹತ್ತಿದೆ' ಎಂದು ಆತಂಕವನ್ನು ವ್ಯಕ್ತಪಡಿಸುವಾಗ ಗೌಡರಿಗೆ ನೆಲಮೂಲ ಕಲೆಗಳ ಬಗ್ಗೆ ಇರುವ ಕಳಕಳಿ ಅಭಿವ್ಯಕ್ತವಾಗುತ್ತದೆ. ಕಲೆಗಳ ಉಳಿಸಿ ಬೆಳೆಸುವುದರಲ್ಲಿ ಸಾಧ್ಯವಾದ ಪ್ರಯತ್ನಮಾಡಬೇಕೆಂಬ ಆಶಯವನ್ನು ವ್ಯಕ್ತಪಡಿಸಿದ್ದಾರೆ. ಮೂಡಲಪಾಯ ನಾಟಕ ನಿಲ್ಲಲು ತ್ರಾಣವಿಲ್ಲದೆ ಸೊರಗಿರುವುದರ ಬಗ್ಗೆ ಹೇಳುತ್ತಾ, ಆ ಕಲಾವಿದರಿಗೆ ಒತ್ತುಕೊಟ್ಟು ಬೆಳೆಸುವುದು ಎಲ್ಲರ ಜವಾಬ್ದಾರಿ ಎಂದು ಎಚ್ಚರಿಸುತ್ತಾರೆ. ಚಿಕ್ಕಮಗಳೂರು ಜಿಲ್ಲೆಯ ಸಖರಾಯ ಪಟ್ಟಣದ ಬಳಿಯ ಹಿರೇಗೌಜದ 'ಪಗರಣ'ಕ್ಕೂ ಹಾಸನ ಬಳಿಯ ಸೀಗೆನಾಡಿನ ಸಂಪ್ರದಾಯಕ್ಕೂ ಇರುವ ಸಂಬಂಧವನ್ನು ಗುರುತಿಸುತ್ತಾರೆ. ನಾನು ಹಿಂದೆ ಹೇಳಿದಂತೆ ಗೌಡರಲ್ಲಿ ಮಲೆನಾಡ ಸಂಸ್ಕೃತಿ ಮತ್ತು ಬಯಲುನಾಡಿನ ಸಂಸ್ಕೃತಿಗಳು ಸಮ್ಮಿಳನಗೊಂಡಿರುವುದನ್ನು ಇಂತಹ ಅಂಶಗಳಿಂದ ಗುರುತಿಸಬಹುದಾಗಿದೆ. ವೈಷ್ಣವ ಸಂಪ್ರದಾಯದ ಬಾಣದೇವರ ಕುಣಿತದ ವಿಶೇಷತೆಯನ್ನು ಇಲ್ಲಿ ಹೇಳಿದ್ದಾರೆ. ಇತರೆ ಜನಪದ ಕಲೆಗಳ ಜೊತೆಗೆ ಜನಪದ ಆಟಗಳನ್ನು, ತಂಬೂರಿ ಸಂಪ್ರದಾಯಕ್ಕೂ ನೀಲಗಾರ ಸಂಪ್ರದಾಯಕ್ಕೂ ಇರುವ ಸೂಕ್ಷ್ಮ ಅಂತರಗಳನ್ನು ಎಳೆಎಳೆಯಾಗಿ ಬಿಡಿಸಿದ್ದಾರೆ.

'ತೊಡಕಿನ ಕಲ್ಲು' ಇದು ಜನಪದ ಕಥೆಯೊಂದರ ಎಲ್ಲಾ ಲಕ್ಷಣಗಳನ್ನೊಳಗೊಂಡಿದ್ದರೂ ಇದು ಒಂದು ಕಾಲದಲ್ಲಿ ನಡೆದ ಘಟನೆಯ ಕಾರಣದಿಂದ ಪ್ರಚಾರಗೊಂಡ ಐತಿಹಾಸಿಕ ಸಂಗತಿಯೇ ಕಾಲಕಳೆದಂತೆಲ್ಲಾ ಮಬ್ಬಾಗುತ್ತಾ ಜನಪದ ಕಥೆಯ ರೂಪುಪಡೆದು ನಿಂತಿರುವುದನ್ನು ಕಾಣಬಹುದು. ಇದರ ಹಿಂದೆ ಲೈಂಗಿಕತೆಯ ಅಂಶ ಅಡಗಿದ್ದರೂ ಅದು ಇಲ್ಲಿ ಗೌಣವಾಗಿದೆ. ಈ ಕತೆ ಹೇಳಿರುವ ಚಿಕ್ಕಯ್ಯನೊಡನೆ ರಾಜೇಗೌಡರು ಬೆರೆತು ಒಂದಾಗಿ ಬೆಳೆದದ್ದರಿಂದಲೇ ಇದನ್ನು ಹೊರತೆಗೆಯಲು ಸಾಧ್ಯವಾಯಿತು ಎಂಬುದನ್ನು

ಗೌಡರೆ ಸ್ಪಷ್ಟಪಡಿಸಿದ್ದಾರೆ. ಹೆಗ್ಗಡೆ ಎಂಬುವರು ಮಲೆನಾಡಿನ ಭಾಗದಲ್ಲಿದ್ದು ಇವರ ಮೇಲೆ ಜೈನರ ಪ್ರಭಾವ ಆದಂತೆ ಮೇಲುಕೋಟೆಯ ತುಳಸೀಕಟ್ಟೆ ವೈಷ್ಣವ ಪ್ರಭಾವವಾಗಿರುವ ವ್ಯಕ್ತಿಯೇ 'ಸತ್ಯುಳ್ಳ ದೇವಪ್ಪ ಹೆಗ್ಗಡೆ'. ಈತ ಬಿದನೂರು ಸಂಸ್ಥಾನದಲ್ಲಿ ದಂಡನಾಯಕನಾಗಿ, ಸನ್ಯಾಸಿಯಾದ ಎಂಬ ಪ್ರತೀತಿಯೊಂದಿಗೆ ಐತಿಹ್ಯ ವ್ಯಕ್ತಿಯಾಗಿ ಉಳಿದಿದ್ದಾನೆ. ಗೌಡರು ಶಿವಮೊಗ್ಗದ ಮಲೆನಾಡಿನ ಭಾಗದಲ್ಲಿ ಮದುವೆಯಾದದ್ದರಿಂದ ಈ ಭಾಗದ ಒಂದು ಐತಿಹ್ಯವನ್ನು ಇಲ್ಲಿ ಪರಿಚಯಿಸಲು ಸಾಧ್ಯವಾಗಿದೆ. ಜನಪದ ಐತಿಹ್ಯವೊಂದನ್ನು ಐತಿಹ್ಯಪುರುಷನೊಬ್ಬನನ್ನು ಹಿಡಿದು ಅತ್ತಇತ್ತ ಎಳೆದಾಡಿದಾಗ ಅನೇಕ ವಿಷಯಗಳು ಸಾಮಾಜಿಕ ರೀತಿನೀತಿ ಆಗುಹೋಗುಗಳು ಪಳೆಯುಳಿಕೆಗಳು ಗಮನಸೆಳೆಯುತ್ತವೆ ಎಂಬುದೇ 'ಮಗನ ತಿಂದ ಮಾರಾಯನ ದುರ್ಗ'. ಒಬ್ಬ ರಾಜ ಮನುಷ್ಯರ ಮಾಂಸದ ರುಚಿಹತ್ತಿ, ತನ್ನ ಮಗನನ್ನೇ ತಿಂದು ನಂತರ ತಿಳಿದಾಗ ದುರ್ಗದಿಂದ ಹಾರಿ ಪ್ರಾಣಾರ್ಪಣೆ ಮಾಡಿಕೊಂಡಿದ್ದೇ ಇದರ ವಸ್ತು. ಆತ್ಮಾವಲೋಕನ ಮಾಡಿಕೊಂಡು ತನ್ನನ್ನು ಅರ್ಪಿಸಿಕೊಂಡ ದುರ್ಗವೇ ಒಂದು ಸ್ಮಾರಕವಾದಂತಿದೆ. ಹರಿಜನರಾದ ಚಿಕ್ಕಯ್ಯ ಮತ್ತು ರಾಜೇಗೌಡರ ನಡುವೆ ಎಲ್ಲಿಲ್ಲದ ಬಾಂಧವ್ಯ. ಇವರಿಬ್ಬರ ನಡುವೆ ಎಂದೂ ಜಾತಿ ಇಣುಕಿಲ್ಲ. ಆದ ಕಾರಣ ಚಿಕ್ಕಯ್ಯ ಇವರಿಗೆ ಹತ್ತಿರದವನಾಗಿ ತನ್ನಲ್ಲಿದ್ದ ಜಾನಪದ ಸರಕನ್ನೆಲ್ಲಾ ಇವರ ಮುಂದೆ ಚೆಲ್ಲಿದ್ದಾನೆ. ಆ ಚಿಕ್ಕಯ್ಯ ಹೇಳಿದ ರಾಮಾಯಣ, ಮಹಾಭಾರತ, ಸತ್ಯವ್ರತ ಈ ಮೂರು ಪುರಾಣ ಕತೆಗಳು ಶಿಷ್ಟಕಾವ್ಯಗಳಿಂದ ದೂರನಿಂತು ಜನಪದ ಬದುಕನ್ನು, ಅವರ ಸಂಸ್ಕೃತಿ, ಆಚಾರ–ವಿಚಾರಗಳನ್ನು ನಂಬಿಕೆಗಳನ್ನು ಕಲಾತ್ಮಕವಾಗಿ ಕಟ್ಟಿಕೊಡುತ್ತವೆ. ಹೆಣ್ಣಿನ ಮರ್ಮಾಂಗದ ಬಗ್ಗೆ ಗಂಡಿಗೆ, ಗಂಡಿನ ಮರ್ಮಾಂಗದ ಬಗ್ಗೆ ಹೆಣ್ಣಿಗೆ ಇರುವ ಸುಪ್ತಬಯಕೆ, ಕುತೂಹಲ ಕಾವ್ಯರೂಪದಲ್ಲಿ ಕಲಾತ್ಮಕವಾಗಿ ಅಭಿವ್ಯಕ್ತವಾದಾಗ ವ್ಯಕ್ತಿಯ, ಸಮಾಜದ ಮಾನಸಿಕ ಅವಸ್ಥೆಯನ್ನು ತಿಳಿಯಲು ಸಹಾಯಕವಾಗುವುದೇ 'ಗಾದೆ ಒಗಟುಗಳಲ್ಲಿ ಲೈಂಗಿಕತೆ' ಎಂಬುದು. ಇವಲ್ಲದೆ

ಮಲೆನಾಡಿನ ಪ್ರಾಣಿ ಮತ್ತು ಪಕ್ಷಿ ಜಾನಪದದ ಮನೋಧರ್ಮದ ಬಗ್ಗೆ, ಕಣತೂರಮ್ಮನ ಸಾಂಸ್ಕೃತಿಕ ಪರಿಚಯದೊಂದಿಗೆ ಕಣತೂರಿನ ಭಾಷಿಕ ವಿವರಣೆ, ಬೇಲೂರಿನಲ್ಲಿರುವ ದುರ್ಗಮ್ಮ ಕೋವಿಪೇಟೆ ದುರ್ಗಮ್ಮನಾಗಿ ಚೆನ್ನಕೇಶವನ ತಂಗಿಯಾಗಿರುವುದು, ಜಾನಪದ ಸಂರಕ್ಷಣೆ ಹೇಗಾಗಬೇಕೆಂಬುದಕ್ಕೆ ಜಾನಪದ ಜೀವಂತ ಸಂರಕ್ಷಣೆಯಾದರೂ ಅದು ಮೂಲಸ್ಥಿತಿಯಲ್ಲಿ ಉಳಿಯುವುದಿಲ್ಲ. ಅದು ಸಾಧ್ಯ ಕೂಡ ಅಲ್ಲ. ಮಾರ್ಪಾಟು ಹೊಂದುವ ಮೂಲಕ ಕಲೆಯನ್ನು ಉಳಿಸಿಕೊಳ್ಳಬೇಕೆಂದು ಯಕ್ಷಗಾನ ಮಾರ್ಪಾಟನ್ನು ಉದಾಹರಿಸಿದ್ದಾರೆ. ಹಣದಿಂದ ಜನಪದ ಕಲೆ ಉಳಿಯುವುದಿಲ್ಲ. ಪ್ರೋತ್ಸಾಹದಿಂದ ಮಾತ್ರ ಕಲೆ ಉಳಿಯಲು ಸಾಧ್ಯ ಎಂಬುದು ಗೌಡರ ಅಭಿಪ್ರಾಯ. ಕೊನೆಗೆ ಅನುಬಂಧದಲ್ಲಿ ಹೊಗಳಿಕೆಪದಗಳು, ಕಣತೂರಮ್ಮನ ಪದಗಳು ಮತ್ತು ಬಿಷ್ಟಮ್ಮನ ಪದಗಳನ್ನು ಕೊಟ್ಟಿರುವುದು ಗೌಡರ ಜಾನಪದ ಚಿಂತನೆಗೆ ಘಟ್ಟಿತನವನ್ನೊದಗಿಸಿದೆ. ಇಂತಹ ಅಧ್ಯಯನಗಳ ಮೂಲಕ ರಾಜೇಗೌಡರು ಹಳ್ಳಿಯಿಂದ ನಗರದ ಕಡೆ ಮುಖ ಮಾಡಿದ್ದರೂ ಹಳ್ಳಿಯ ಆಕರ್ಷಣೆ ಅವರಿಂದ ದೂರವಾಗಿಲ್ಲ ಎಂಬುದು ಇಂತಹ ಕೃತಿಗಳ ಮೂಲಕ ತಿಳಿಯಲು ಸಾಧ್ಯವಾಗುತ್ತದೆ. "ಹಳ್ಳಿಗಾಡಿನ ಬದುಕಿನ ಅವಿಭಾಜ್ಯ ಅಂಗವಾಗಿ ನಿಂತಿರುವ ಕೆಲವು ಕುತೂಹಲಕರ ಸಂಗತಿಗಳನ್ನೆಲ್ಲ ತೆರೆದ ಮನಸ್ಸಿನಿಂದ ವಿಶ್ಲೇಶಿಸುವ ಆಸೆಯುಳ್ಳ ಈ ಲೇಖಕರು ತಮ್ಮ ಬರಹಗಳಲ್ಲಿ ತಾವು ಆಸಕ್ತಿಯಿಂದ ಗ್ರಹಿಸಿರುವ ವಿವರಗಳ ನೆರವಿನಿಂದ ಮೂಲದ ಸ್ವರೂಪವನ್ನು ಅರಿಯಲು ನಡೆಸಿರುವ ಪ್ರಯತ್ನವನ್ನು ಕಾಣಬಹುದು" ಎಂಬ ಡಾ. ಕಾಳೇಗೌಡ ನಾಗಾವಾರ (ಪ್ರಜಾವಾಣಿ ಪುಸ್ತಕ ವಿಮರ್ಶೆವಿಭಾಗ) ಅವರ ಅಭಿಪ್ರಾಯ ಸಮಂಜಸವಾಗಿದೆ. ಈ ಕೃತಿ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯಿಂದ ಪುಸ್ತಕ ಬಹುಮಾನ ಪಡೆದಿರುವುದು ಅತ್ಯಂತ ಗೌರವಪೂರ್ವಕವಾಗಿದೆ.

ಕೋಳಿ ಮತ್ತು ತುಳಸೀಕಟ್ಟೆ : ರಾಜೇಗೌಡರ ಮೊದಲ ಕಥಾಸಂಕಲನ. ಆದರೆ ಗೌಡರೇ ಹೇಳುವಂತೆ ಇವು ಸಂಪೂರ್ಣಕಥೆಗಳೆಂದು ಹೇಳಲು

ಬರುವುದಿಲ್ಲ. ರಾಜೇಗೌಡರು ಗ್ರಾಮ್ಯ ಜೀವನವನ್ನು ಸೂಕ್ಷ್ಮವಾಗಿ ಕಂಡವರು. ಅಲ್ಲಿ ಕಂಡಂತಹ ಹಲವಾರು ಸನ್ನಿವೇಶಗಳು ಗೌಡರ ಮೂಸೆಯಲ್ಲಿ ಕರಗಿ ಸೃಜನಶೀಲತೆಯ ಮೆರಗನ್ನು ಪಡೆದುಕೊಂಡಿವೆ.

ಕೃತಿಯ ಒಳಹೊಕ್ಕು ನೋಡಿದಾಗ ಪರಂಪರೆಯನ್ನು ಉಳಿಸಿಕೊಳ್ಳುವಂತಹ ಕಥೆಗಳು ಇವೆ.

ಒಟ್ಟಾರೆಯಾಗಿ "ಶ್ರೀಯುತ ರಾಜೇಗೌಡರ ಬರವಣಿಗೆಯ ಶೈಲಿಯಲ್ಲಿ ಇರುವ ಹಸಿಯಾದ ದೇಸಿತನ ಅವರ ವಸ್ತುಚಿತ್ರಣದೊಡನೆ ಸುಲಭವಾಗಿ ಮಿಳಿತವಾಗುತ್ತದೆ. ಹೀಗಾಗಿ ವಿಶಿಷ್ಟವಾದ ಚಿತ್ರಗಳು ಸಹಜವಾಗಿಯೇ ಇವರ ಕಥೆಗಳಲ್ಲಿ ಮೈತಳೆಯುತ್ತವೆ, ಹೊಸತನವನ್ನು ತೋರುತ್ತವೆ.

ಜಾನಪದ ಸಂಕಥನ : ಇದು ಗೌಡರ ಜಾನಪದ ವೈಚಾರಿಕ ಲೇಖನಗಳನ್ನೊಳಗೊಂಡ ಕೃತಿ. ಗೌಡರು ಜಾನಪದವನ್ನು ಇದ್ದಹಾಗೆ ತಂದಿಡುವವರಲ್ಲ. ಅದನ್ನು ಕೆದಕಿ, ಬೆದಕಿ ಅದರೊಳಗಿರುವ ಜಾನಪದ ಸಾಂಸ್ಕೃತಿಕಸತ್ವವನ್ನು ಹೊರಗೆಡವಿದವರು. ಇದಕ್ಕೆ ಕಾರಣ ಅವರಿಗೆ ಮಾದರಿಯಾಗಿರುವವರು, ಸಂಶೋಧನೆಯ ಆಳಕ್ಕೆ ಇಳಿಯುವಂತೆ ಮಾಡಿರುವವರೆಂದರೆ ಶಂಬಾಜೋಷಿ, ದೇವಿಪ್ರಸಾದ ಚಟ್ಟೋಪಾಧ್ಯಾಯ, ಡಿ.ಡಿ. ಕೋಸಾಂಬಿಯಂತಹವರು. ಪಿತೃಸಂಸ್ಕೃತಿ ಮಾತೃಸಂಸ್ಕೃತಿಯ ಬಗ್ಗೆ ಗೌಡರ ಗಮನಸೆಳೆದಿರುವವರು ಶಂಬಾಜೋಷಿ. ಭೌತಿಕವಾದದ ಕಡೆ ಗಮನ ಸೆಳೆದಿರುವವರು ದೇವಿಪ್ರಸಾದ ಚಟ್ಟೋಪಾಧ್ಯಾಯ ಅವರು. ಸಂಸ್ಕೃತಿಹುಡುಕಾಟ ತೋರಿಸಿರುವವರು ಡಿ.ಡಿ. ಕೋಸಾಂಬಿ ಅವರು. ಈ ಹಿನ್ನೆಲೆಯಲ್ಲಿ ರೂಪುಗೊಂಡಿರುವುದೇ ಜಾನಪದ ಸಂಕಥನ. ರಾಜೇಗೌಡರೇ ಹೇಳುವಂತೆ "ಗೌರಿಹಬ್ಬವೆಂದರೇನು? ಗಣೇಶ ಚತುರ್ದಶಿ ಎಂದರೇನು? ಸಂಕ್ರಾಂತಿ ದಿಪಾವಳಿಗಳೇನು? ಸುಬ್ಬಪ್ಪನಾರು? ಹೀಗೆಲ್ಲಾ ಪ್ರಕೃತಿಯ ದೇಹಕ್ಕೆ ಪುರುಷನನ್ನು ಹೊಂದಿಸುತ್ತಾ ಭಯ, ವಿಸ್ಮಯ, ಆನಂದ ಅತಿರೇಕಗಳನ್ನೆಲ್ಲಾ

ಜೋಡಿಸುತ್ತಾ ತುಂಡಾಗಿಸುತ್ತಾ ಮನುಷ್ಯನ ಏಳು-ಬೀಳು, ಹುಟ್ಟು-ಸಾವು ಜೀವನಕ್ರಮಗಳನ್ನು ಚಿಂತಿಸುವ ಕ್ರಿಯೆ ಜಾನಪದವಲಯದಲ್ಲಾಗಬೇಕು. ಜಾನಪದ ಅಧ್ಯಯನ ಕೇವಲ ಸಾಮಗ್ರಿ ತರುವುದಲ್ಲ. ತಂದ ಸಾಮಗ್ರಿಯನ್ನು ವಿಶ್ಲೇಷಿಸುವುದಷ್ಟೇ ಅಲ್ಲ, ಸುಬ್ರಹ್ಮಣ್ಯದ ಕುಕ್ಕೆ ವೊಳಗೇನಿದೆ ಎದು ಬಗ್ಗಿ ನೋಡುವ ಕ್ರಿಯೆಯೂ ಆಗಬೇಕು. ಹುತ್ತದೊಳಗಿರುವ ನಾಗಪ್ಪ ಹಾಲೆರೆವ ನಾರಿಯ ಕೈಕಚ್ಚುವುದಿಲ್ಲ. ಗೆದ್ದಲು ಗೂಡಲ್ಲಿ ಸೇರಿಕೊಂಡಿರುವ ನಾಗಪ್ಪಂದಿರು ಬೆದರಿಸುತ್ತಾರಷ್ಟೇ.... ಮಾರಿ ಕೇವಲ ಬ್ರಾಹ್ಮಣಹೆಣ್ಣೆ? ಅವಳು ಇಡೀ ಮಾತೃ ಸಮಾಜದವರಿಂದಲೇ ಕತೆಹೇಳಿಸುತ್ತಿರುವ ಪಿತೃಸಮಾಜದ ಹುನ್ನಾರವನ್ನು ಗುರುತಿಸಬೇಕು. ಇಂಥ ಪ್ರಯತ್ನಗಳನ್ನು ಇಲ್ಲಿನ ಲೇಖನಗಳಲ್ಲಿ ಪ್ರಸ್ತಾಪಿಸಿದ್ದೇನೆ" ಹೀಗೆ ಗೌಡರು ಸಂಸ್ಕೃತಿಯ ಶೋಧಕರ ಜಾಡುಹಿಡಿದು ಹೊರಟಿರುವುದು ಅವರ ಮಾತುಗಳಿಂದಲೇ ತಿಳಿಯುತ್ತವೆ. ಅವರ ಅಧ್ಯಯನ ಮಾದರಿಯನ್ನು ಸ್ಪಷ್ಟಪಡಿಸುತ್ತವೆ.

ಈ ಕೃತಿಯಲ್ಲಿ ಹದಿಮೂರು ಲೇಖನಗಳಿದ್ದು, ಅವುಗಳಲ್ಲಿ ಸಾಂಸ್ಕೃತಿಕ ಹುಡುಕಾಟದ ಪ್ರಯತ್ನ, ಪ್ರಕೃತಿ ದೇಹಕ್ಕೆ ಪುರುಷನನ್ನು ಹೋಲಿಸುತ್ತಾ ಮನುಷ್ಯನ ಏಳು-ಬೀಳುಗಳನ್ನು, ಹುಟ್ಟು-ಸಾವುಗಳನ್ನು ದೇಶೀಯ ಹಾಗೂ ವೈಚಾರಿಕ ನೆಲೆಯಲ್ಲಿ ಚಿಂತಿಸಿರುವುದನ್ನು ಕಾಣಬಹುದು. ಮೊದಲ ಲೇಖನ ದಾಸವಕ್ಕಲಿಗರನ್ನು ಕುರಿತದ್ದಾಗಿದೆ. ದಾಸಒಕ್ಕಲಿಗರ ಆಚಾರ-ವಿಚಾರ, ಸಂಪ್ರದಾಯ-ಪದ್ಧತಿಗಳನ್ನು ತಿಳಿಸುವುದರೊಂದಿಗೆ ಶೈವಸಂಪ್ರದಾಯ ವೈಷ್ಣವ ಸಂಪ್ರದಾಯಕ್ಕೆ ಹೊರಳಿರುವ ವಿಚಾರ ಇದೆ. ಚಾರಿತ್ರಿಕ ಸಂಘರ್ಷದಲ್ಲಿ ಶಿವನಿಗೂ ವಿಷ್ಣುವಿಗೂ ಮಾರಾಮಾರಿಯಾಗಿವೆ. ಅದೇ ಶಂಕರಾಚಾರ್ಯನಿಗೂ ರಾಮಾನುಜಾಚಾರ್ಯನಿಗೂ ಯುದ್ಧವಾಗಿರುವುದನ್ನು ಪ್ರಸ್ತಾಪಿಸುತ್ತಾ, ಹಂಪೆ ಹಾಳಾಗಿದ್ದು ಶೈವ ಮತ್ತು ವೈಷ್ಣವ ಸಂಘರ್ಷಣೆಯಿಂದಲೇ ಹೊರತು, ಚರಿತ್ರೆ ಹೇಳುವಂತೆ ಮುಸಲ್ಮಾನರಿಂದ ಅಲ್ಲ ಎಂಬ ವಾದವನ್ನು ಮುಂದಿಡುತ್ತಾರೆ. ದಾಸಒಕ್ಕಲಿಗರು ಮುಳ್ಳು(ಗಂಗಡಿಕಾರ) ಒಕ್ಕಲಿಗರಿಗಿಂತ ಕೆಲವು ದೃಷ್ಟಿಯಲ್ಲಿ

ಭಿನ್ನವಾಗಿದ್ದು, ದಾಸಒಕ್ಕಲಿಗರಲ್ಲಿಯೂ ದಳಬಾಯಿದಾಸ ಮತ್ತು ದಳವಾಯಿದಾಸ ಎಂಬ ಪಂಗಡಗಳಿದ್ದರೂ ಈ ಎರಡಕ್ಕೂ ಅಂತಹ ವ್ಯತ್ಯಾಸವಿಲ್ಲ ಎಂಬುದನ್ನು ತಿಳಿಸುತ್ತಾರೆ. ಹರ–ಹರಿಗಳ ವೈದಿಕ ತಿಕ್ಕಾಟದಲ್ಲಿ ಈಟಿ ಅಥವಾ ತ್ರಿಶೂಲಗಳು ಅಡ್ಡ, ಉದ್ದವಾಗಿ ಮಲಗಿ ಅಥವ ಎದ್ದು ನಾಮ, ವಿಭೂತಿಗಳಾಗಿ ಉಳಿದಿರುವುದನ್ನು ಸ್ಪಷ್ಟಪಡಿಸುತ್ತಾ ವಿಭೂತಿ ಮುಳ್ಳು ಜನರ, ನಾಮ ದಾಸಒಕ್ಕಲಿಗರ ಲಾಂಛನವಾಗಿರುವುದನ್ನು ತಿಳಿಸಿದ್ದಾರೆ. ಸಾವು ಮಾತೃಮೂಲದ್ದು ಎಂದು ಹೇಳುತ್ತಾ, ಹುಟ್ಟಿನಂತೆ ಸಾವು ಕೂಡ ಒಂದು ನೈಸರ್ಗಿಕ ಕ್ರಿಯೆ. ಸಾವು ಅದೊಂದು ಸಂಸ್ಕಾರ, ದೇಹ ಅದೊಂದು ಸಹಜ ಕ್ರಿಯೆ. ದೇಹರಸ, ವೃಕ್ಷರಸಗಳೆರಡು ಅಂದಿನ ಸಮಾಜದ ಮೂಲ ಪ್ರತೀಕಗಳು. ಮಾತೃವಿನ ದೇಹರಸ ಎರಡು. ಒಂದು ಫಲ ಮೂಲದ ಮುಟ್ಟು. ಎರಡನೆಯದು ಫಲ ಬಿಟ್ಟನಂತರದ ಎದೆಹಾಲು. ವೃಕ್ಷ ಮೂಲದ್ದು ಮದ್ಯ. ಈ ಎದೆಹಾಲು ಮತ್ತು ಮದ್ಯಕ್ಕೆ ಸಾದೃಶ್ಯವಿರುವುದನ್ನು ಹೇಳುತ್ತಾ ಮಾತೃಮೂಲವನ್ನು, ಅದರ ಸಂಬಂಧಗಳನ್ನು ಹುಡುಕುತ್ತಾರೆ. ಮದ್ಯ, ಮಾಂಸ, ಮಿಥುನಗಳು ಸಮಾಜದ ಅಂಗೀಕಾರ ವಿಧಾನಗಳು. ಆದ್ದರಿಂದಲೆ ಸತ್ತಾಗ ದಾಸಒಕ್ಕಲಿಗರಲ್ಲಿ ಪೂಜೆಗೆ ಮಾಂಸ ಮತ್ತು ಮದ್ಯವನ್ನು ವಿಶೇಷವಾಗಿ ಬಳಸುವುದನ್ನು ಹೇಳುತ್ತಾರೆ. ವ್ಯಕ್ತಿ ಸತ್ತಾಗ ಒಂದು ಸುಡುವ ಸಂಸ್ಕೃತಿ ಮತ್ತೊಂದು ಹೂಳುವ ಸಂಸ್ಕೃತಿ. ಈ ಎರಡು ಸಂಸ್ಕೃತಿಗಳು ಎಲ್ಲಾ ಕಡೆ ಇದ್ದು, ಒಂದು ಪಿತೃಮೂಲದ್ದು, ಮತ್ತೊಂದು ಮಾತೃಮೂಲದ್ದು. ಬ್ರಾಹ್ಮಣರ ಸುಡುವಪದ್ಧತಿ ಪಿತೃಮೂಲದ್ದಾದರೆ, ಜನಪದರ ಹೂಳುವ ಸಂಸ್ಕೃತಿ ಮಾತೃಮೂಲದ್ದು ಎಂದು ಸ್ಪಷ್ಟಪಡಿಸುತ್ತಾ, ತೌಲನಿಕ ಅಧ್ಯಯನಕ್ಕೆ ಸಾಂಸ್ಕೃತಿಕ ಮಿಶ್ರಣ ಎಲ್ಲೆಲ್ಲಿ ಆಗಿದೆ ಎಂಬ ಜಾಡನ್ನು ಹಿಡಿಯುವ ಪ್ರಯತ್ನಮಾಡಿರುವುದು 'ಸಾವು: ಮಾತೃಮೂಲದ ಜಾನಪದೀಯ ಚಿಂತನೆ' ಎಂಬಲ್ಲಿ ಚರ್ಚಿಸಿದ್ದಾರೆ. 'ಕರ್ನಾಟಕದ ಜಾನಪದ ಆಟಗಳು' ಎಂಬಲ್ಲಿ ಹಳ್ಳಿಗಾಡಿನ ಎಲ್ಲಾ ಜನಪದ ಆಟಗಳನ್ನು ಪರಿಚಯಿಸುತ್ತಾ ಜಗತ್ತಿನ ಪ್ರಕೃತಿಯನ್ನು ದೇಹ ಪ್ರಕೃತಿಯೊಡನೆ

ಸಮನ್ವಯಗೊಳಿಸಿದುದನ್ನು ತಿಳಿಸಿ, ಸಂಸ್ಕೃತಿಯನ್ನು ಒಡೆದು ಮತ್ತೆ ಕಟ್ಟುವ ಪರಿಕಲ್ಪನೆ ಜನಪದ ಅಧ್ಯಯನವೆಂದು ಸಾಂಸ್ಕೃತಿಕವಾದ ಚಿಂತನೆಗೆ ತೊಡಗಿದ್ದಾರೆ. 'ನಾಗರ ಪಂಚಮಿ'ಯನ್ನು ಕುರಿತು ಒಂದು ಜನಪದ ಕಥೆಯ ಮೂಲಕ ಸಾದರಪಡಿಸಿ, ಗ್ರಾಮೀಣ ಸಮಾಜದಲ್ಲಿ ಆಚರಣೆಯೊಂದು ಲೈಂಗಿಕಸಂಜ್ಞೆಯೊಂದಿಗೆ ಹಾಸ್ಯಲೇಪ ಪಡೆದುಕೊಳ್ಳುವುದನ್ನು ನೋಡಿದಾಗ ಅದು ಆಚರಣೆಯ ಜೊತೆಗೆ ಅಧ್ಯಯನದ ವಸ್ತುವಾಗುವುದನ್ನು ಕೂಡ ಗಮನಿಸಬಹುದಾಗಿದೆ. ಇಲ್ಲಿ ಬಂಧುಮೂಲದ ತಡಕಾಟಗಳು ಇರುವುದನ್ನು ಕಾಣಬಹುದು.

ಐತಿಹ್ಯ–ಪುರಾಣ, ಚಾರಿತ್ರಿಕಹಿನ್ನೆಲೆಯಲ್ಲಿ ಕೌಲೇದುರ್ಗದ ಹಿನ್ನೆಲೆಯನ್ನು ತಿಳಿಸುತ್ತಾ, ಈ ಪದದ ಅರ್ಥನಿಷ್ಪತ್ತಿಯನ್ನು ತಿಳಿಸಿ ಅದು ಮಾತೃಸಂಸ್ಕೃತಿಯನ್ನು ನಿರ್ದೇಶಿಸುವುದನ್ನು ಹೇಳುತ್ತಾರೆ. ದಂಡಿನ ಮಾರಿಯ ಬಗ್ಗೆ ವಿವರಣೆ ನೀಡುತ್ತಾ "ಈ ಮಾರಿ ಹಿಂದೊಮ್ಮೆ ಬ್ರಾಹ್ಮಣ ಕನ್ಯೆಯಾಗಿದ್ದು ಗೊತ್ತಿಲ್ಲದೆ ಮಾದಿಗನನ್ನು ಮದುವೆಯಾಗಿ ಮಕ್ಕಳಾಗಿ ವಿಷಯ ತಿಳಿದು ಅವಳಿಂದಲೇ ದುರ್ಗಿರೂಪದಲ್ಲಿ ಕೊಲ್ಲಲ್ಪಡುವಾಗ ಮಾದಿಗನು ಕೋಣನ ಹೊಟ್ಟೆ ಸೇರಿದರೂ ಬಿಡದೆ ಹತನಾದವನು" ಎಂಬುದಾಗಿ ಅದೊಂದು ಸಾಂಸ್ಕೃತಿಕ ಘಟ್ಟವೆಂದು ಸ್ಪಷ್ಟಪಡಿಸುತ್ತಾ ಮೂಲಜಗತ್ತನ್ನು ಕತ್ತಲಲ್ಲಿ ತಡಕಿ ಬೆಳಕಿನಲ್ಲಿ ನೋಡುವ ಕೆಲಸವನ್ನು ಮಾಡಿದ್ದಾನೆ. 'ಜಾನಪದ ಮತ್ತು ಹಿಂಸೆ' ಹೊಟ್ಟೆಪಾಡಿಗಾಗಿ ಮನುಷ್ಯ ಹಿಂಸಾಪ್ರಾಣಿಯಾದರೆ, ಪುರುಷ ಸ್ತ್ರೀಗೆ ಕೊಡುವ ಹಲವಾರು ಹಿಂಸೆಗಳು ಮಾನಸಿಕ ಹಿಂಸೆಗಳು ಮುಂತಾದವುಗಳನ್ನು ಜಾನಪದ ಹಿನ್ನೆಲೆಯಲ್ಲಿ ಪುರಾಣಗಳ ನಿದರ್ಶನಗಳೊಂದಿಗೆ ತಿಳಿಸಿ, ವಂಶವಾಹಿನಿಯಲ್ಲಿ ಪುರುಷ ತಾನು ಮೇಲು ಎಂದು ಬಲಾತ್ಕಾರವಾಗಿ ಹಿಂಸೆಯಿಂದ ಸಾಧಿಸಿದ್ದೇ ಮಾತೃಪ್ರಧಾನ ಕುಟುಂಬ ನಶಿಸಲು ಕಾರಣವಾಯಿತು. ಹಿಂಸೆ ಮಾಂಸ ಕತ್ತರಿಸುವ ಕಟುಕನ ಕೈಯಲ್ಲಿಲ್ಲ. ಗಿಳಿಪಾಠ ಓದುವ ವಿದ್ಯಾವಂತರಲ್ಲಿ ಅಡಗಿರುವುದನ್ನು ಸಾಂಸ್ಕೃತಿಕ ಹಿನ್ನೆಲೆಯಲ್ಲಿ ಚರ್ಚಿಸಿದ್ದಾರೆ. 'ಗ್ರಾಮೀಣ

ಸಮಾಜದಲ್ಲಿ ಹೆಣ್ಣು' ಎಂಬಲ್ಲಿ ಹೆಣ್ಣು ಭೌಗೋಳಿಕವಾಗಿ, ಸಾಮಾಜಿಕವಾಗಿ, ಸಾಂಸ್ಕೃತಿಕವಾಗಿ, ಮಾನಸಿಕವಾಗಿ, ಲೈಂಗಿಕವಾಗಿ ಹೆಣ್ಣಿನ ಸ್ಥಾನ ಗ್ರಾಮೀಣ ಸಮಾಜದಲ್ಲಿ ಗಂಡಿನ ಹೊಡೆತಕ್ಕೆ ಸಿಕ್ಕಿ ಅಬಲೆಯಾಗಿರುವುದನ್ನು, ಗ್ರಾಮೀಣ ಹೆಣ್ಣು ಚಾರಿತ್ರಿಕವಾಗಿ ಅತ್ಯಾಚಾರಕ್ಕೊಳಗಾಗಿರುವುದನ್ನು ಎಳೆಎಳೆಯಾಗಿ ಬಿಡಿಸುತ್ತಾ ಗ್ರಾಮೀಣ ಹೆಣ್ಣು ನೊಂದು ಹೆಣ್ಣಾಗಿರುವುದನ್ನು ತಿಳಿಸುತ್ತಾರೆ. ಜನಪದ ಹೆಣ್ಣಿನ ನೋವಿನ ಹಲವು ಮುಖಗಳು ಇಲ್ಲಿ ಬಿಂಬಿತವಾಗಿವೆ. ಜನಪದ ಕಥೆಗಳು ಒಂದು ಸಂಸ್ಕೃತಿಯನ್ನು ಪರಿಚಯಿಸುವಾಗ ಅದು ಚರಿತ್ರೆಯ ಘಟ್ಟವನ್ನು ಪ್ರತಿಬಿಂಬಿಸುವುದರೊಂದಿಗೆ ಮಾತೃ ಮತ್ತು ಪಿತೃ ಸಂಸ್ಕೃತಿಗಳ ಸಂಘರ್ಷವನ್ನು ಕಾಣಬಹುದು ಎಂಬುದನ್ನು 'ಜನಪದ ಕತೆಗಳಲ್ಲಿ ಜಾಣತನ' ಎಂಬುದರಲ್ಲಿ ನೋಡಬಹುದು.

'ವರ್ಣ ಮತ್ತು ಜಾತಿ' ಎಂಬ ಲೇಖನದಲ್ಲಿ ಇಡೀ ಭಾರತೀಯ ಸಮಾಜ ಜಾತಿ, ವರ್ಣಗಳ ಹೆಸರಿನಲ್ಲಿ ನಲುಗಿಹೋಗಿರುವುದನ್ನು ಗೌಡರು ಖಾರವಾಗಿಯೇ ಪ್ರತಿಕ್ರಿಯಿಸುತ್ತಾರೆ. ಜನಪದ ಸಮಾಜವು ಹಿಂದೂಗಳಲ್ಲ. ಜನಪದರು ಭಾರತೀಯರು ಎಂಬ ವಿಶಾಲ ಮನೋಭಾವವನ್ನು ವ್ಯಕ್ತಪಡಿಸುತ್ತಾ ಜನಪದರು ಮಾತೃಸಮಾಜದ ಮಕ್ಕಳು, ಜನಪದೇತರರು, ಪಿತೃಸಮಾಜದ ಅಗ್ನಿ ಪುತ್ರರು ಎಂಬ ಛಡಿಯೇಟುಗಳನ್ನು ನೀಡುತ್ತಾರೆ. ಒಂದು ಪರಂಪರೆ, ಪ್ರಾಚೀನತೆ, ಮೌಲ್ಯಗಳ ಸಾಕಾರವೇ 'ಉದೇವಾರದ ಮನೆ'. ಆದು ಮನೆಯಲ್ಲ, ಬಾಳಿ ಬದುಕಿದವರ ಕತೆಹೇಳುವ ಚಂದದ ಮನೆಯಾಗಿದ್ದು, ವಾಸ್ತು ಅಧ್ಯಯನಕ್ಕೆ ಅನುಕೂಲವಾದ ಆಕರವಾಗಿದೆ. 'ಮನೆ' ಮಾನವನ್ನು ಅಳೆಯುವ ಮಾನದಂಡ ಎಂಬುದು ರಾಜೇಗೌಡರ ಅನಿಸಿಕೆಯಾಗಿದೆ. ಪುರಾಣ, ಐತಿಹ್ಯ, ಚಾರಿತ್ರಿಕ ಮತ್ತು ಭಾಷಿಕ ಹಿನ್ನೆಲೆಯಲ್ಲಿ ವಿಶ್ಲೇಷಿಸಿರುವ ಲೇಖನವೇ 'ಹಾಸನ ಜಿಲ್ಲೆಯ ಸ್ಥಳನಾಮಗಳು' ಎಂಬುದು. ಜೀವನದ ಪ್ರಧಾನ ಲೀಲೆಗಳಾದ ಕಾಮ, ಪ್ರೇಮಗಳನ್ನು ಕುರಿತು ಪಾಠಹೇಳುವವೆ 'ಗಾದೆಗಳ ಗರ್ಭದೊಳಗೆ' ಎಂಬುದು. ಇಲ್ಲಿ ಗಾದೆಗಳು ಮುಖಕ್ಕೆ ರಾಚಿದಂತೆ ಕಂಡರೂ ನೀತಿ ಗರ್ಭದೊಳಗೆ

ಅಡಗಿರುವುದು ಮೌಲ್ಯಯುತವಾಗಿದೆ. 'ದಾಸಪ್ಪನ ಕಥೆಗಳಲ್ಲಿ' ಊರೂರು ಸುತ್ತುವ ದಾಸಯ್ಯ ಸಿಕ್ಕಸಿಕ್ಕ ಹೆಂಗಸರೊಡನೆ ಲೈಂಗಿಕ ಸಂಪರ್ಕ ಬೆಳೆಸುವುದು ಅಸಹಜವಲ್ಲದಿದ್ದರೂ ದಾಸಯ್ಯನ ಮೂಲಕ ಜನಪದ ಸಮಾಜ ಅಪಹಾಸ್ಯಕ್ಕೆ, ಲೇವಡಿಗೆ ಒಳಗಾಗಿರುವುದನ್ನು ಕಾಣಬಹುದಾಗಿದೆ.

ಹೀಗೆ 'ಜಾನಪದ ಸಂಕಥನ' ಕೃತಿಯು ರಾಜೇಗೌಡರ ಮಾತೃ ಸಂಸ್ಕೃತಿಯ ಮೂಲ ಹುಡುಕಾಟವನ್ನು ಚರ್ಚೆಗೊಳಪಡಿಸುವ ರೀತಿಗೆ, ಕೃತಿಗೆ ಮುನ್ನುಡಿ ಬರೆದಿರುವ ಡಾ.ಹಿ.ಶಿ. ರಾಮಚಂದ್ರಗೌಡರ "ಹಿಂದೆ, ಈ ಹೊಸಹಳ್ಳಿ ರಾಜೇಗೌಡರನ್ನು ಗಮನವಿಟ್ಟು ಓದಲಿಲ್ಲವಲ್ಲ ನಾನು. ಏನು ಪ್ರಮಾದವಾಯಿತು. ಹತ್ತರ ಜೊತೆಗೆ ಹನ್ನೊಂದು ಮಾಡಿಬಿಟ್ಟೆನಲ್ಲ. ಬಾಯಿಬುಡುಕರ ಮಧ್ಯೆ ಮೌನಿಯ ಧ್ವನಿ ಮಹತ್ವಕಾಣಲಿಲ್ಲ. ಮಾಯೆಕವಿಯಿತಲ್ಲ. ಈ ಬೆಳ್ಳನೆ ಮುಖದ ನಗುವ ಹಲ್ಲುಗಳ ಗೌಡರು ಏನು ಬರೆದಾರೆಂದರೆ ಸೂರ್ಯ ಚಂದ್ರರ ಹಿಡಿದು ಆಟವಾಡಿಸಬಹುದೆ? ಜಾನಪದ ಜಗತ್ತಿನ ಜೋಗತಿ ಚೀಲದಿಂದ ನಮ್ಮಗಳ ಶೀಲವ ಬದಲಿಸಿಬಿಡಬಹುದೆ? ಎಲ್ಲಿಂದೆಲ್ಲಿಗೆ. ಸಂಸ್ಕೃತಿಯ ಸುಳಿವುಗಳ ಹಿಡಿದು ತಡವುತ್ತಾ ವೇದಗಳ ಅಗೆವ ಅಗೆದು ಮುಗ್ಗುಲು ಜೋಳವ ಒಗೆದು ಹೆಣ್ಣುಗಳ ಜೀವದ್ರವ್ಯವ ಹರಿಸಿ ಜನಪದವ ತಂಪಾಗಿಸುವ ಜಲ-ಅಗ್ನಿಗಳ ದಿಬ್ಬವ ಹರಿದು ಈ ಓದು-ಬರಹ; ಆಳ-ಅಗಲ. ಕೋಣೆ ಮುಂಡೂಕಗಳ ಒಳಗಿಂದ ಸಿಡಿವ ಪಟಾಕಿಗಳ ಪುಳಕ. ಜಾನಪದವ ಹುಡುಕಿ ಸ್ಮಶಾನದ ಕಡೆಗೆ ಹೊರಡದೆ, ಪ್ರಾಕೃತ ಪ್ರಭುತ್ವವ ಕೊಂಡಾಡದೆ, ಮೆಡಗಾರಿಕೆಯ ಜಾತಿವೈಭವಗಳಲ್ಲಿ ತಲ್ಲೀನನಾಗದೆ, ಇರವಿನ ಪರಿಯಲಿ ಇರುವ ಪುಳಕಗಳ ಸಂಜೀವಗೊಳಿಸುವ ಈ ಸಾಧಕನ ನೋಡಯ್ಯ" ಎಂಬ ಮಾತುಗಳು ರಾಜೇಗೌಡರ ಕೆಲಸದ ಬಗ್ಗೆ ಮೆಚ್ಚುಗೆಯನ್ನು ವ್ಯಕ್ತಪಡಿಸುವಂತಹವುಗಳಾಗಿವೆ. ಒಟ್ಟಿನಲ್ಲಿ ಈ ಕೃತಿ ಸಂಸ್ಕೃತಿಯ ಚರ್ಚೆಯೊಂದಿಗೆ ವೈಚಾರಿಕತೆಯನ್ನು ಒಳಗೊಂಡಿರುವ ಮಾತೃಮೂಲ ಸಂಸ್ಕೃತಿಯ ಅಧ್ಯಯನವಾಗಿದೆ.

ಅಕ್ಕಯ್ಯಮ್ಮನ ಸಂಸಾರ : ಇದು ರಾಜೇಗೌಡರ ಎರಡನೇ ಕಥಾಸಂಕಲನ. ಇವರ ಮೊದಲ ಸಂಕಲನ 'ಕೋೞಿ ಮತ್ತು ತುಳಸಿ ಕಟ್ಟೆ' ಯಲ್ಲಿ ಘಟನೆಗಳ ಚಿತ್ರವೇ ಕಥಾರೂಪ ಪಡೆದಿವೆ. ಆದರೆ ಇಲ್ಲಿಯ ಕಥೆಗಳು ಆ ಘಟನೆಗಳ ಚಿತ್ರಣದ ಮೂಲಕ ಕಥಾಪ್ರಸಂಗಗಳಾಗಿ ರೂಪುಪಡೆದಿರುವುದನ್ನು ಕಾಣಬಹುದು. ಮೊದಲ ಸಂಕಲನದ ಮೇಲೆ ಕುವೆಂಪು, ಗೊರೂರರ ದಟ್ಟ ಪ್ರಭಾವ ಇದ್ದರೆ, ಎರಡನೇ ಸಂಕಲನದಲ್ಲಿ ಶ್ರೀಕೃಷ್ಣ ಆಲನಹಳ್ಳಿ ಹಾಗೂ ಡಾ. ಬೆಸಗರಹಳ್ಳಿ ರಾಮಣ್ಣನವರ ಪ್ರಭಾವ ಸೂಕ್ಷ್ಮಾತಿಸೂಕ್ಷ್ಮವಾಗಿ ಬೆರೆತುಕೊಂಡಿರುವುದನ್ನು ಕಾಣಲು ಸಾಧ್ಯವಿದೆ. ಗ್ರಾಮೀಣ ಸಮಾಜದ ಹೊಲಗದ್ದೆಗಳ, ಮನೆ, ಕಣ ಹೀಗೆ ಬದಲಾಗುತ್ತಿರುವ ಸಾಂಸ್ಕೃತಿಕತೆಯನ್ನು, ಸಮಾಜವನ್ನು ಗೌಡರು ಕಥೆಗಳ ಮೂಲಕ ಕಂಡಿದ್ದಾರೆ. ಚಾರಿತ್ರಿಕ ತಾಕಲಾಟಗಳನ್ನು ಗುರುತಿಸಿದ್ದಾರೆ. ಬದಲಾಗುವ ಸಮಾಜದ ಪ್ರತಿನಿಧಿಯೂ ಆಗಿದ್ದಾರೆ.

ತಾಳಬಂದೋ..... ತಂಬೂರಿ ಬಂದೋ : ಈ ಕೃತಿ ರಾಜೇಗೌಡರ ಸಂಶೋಧನೆಯ ಫಲ. ಇದು 'ತಂಬೂರಿ ಜಾನಪದ ಸಂಪ್ರದಾಯದ ಸಾಹಿತ್ಯ–ಒಂದು ಸಾಂಸ್ಕೃತಿಕ ಅಧ್ಯಯನ' ಎಂಬ ವಿಷಯ ಕುರಿತು ಬೆಂಗಳೂರು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಿದ ಪಿಎಚ್.ಡಿ. ಮಹಾಪ್ರಬಂಧ. ರಾಜೇಗೌಡರು ಕೇವಲ ಪದವಿಗಾಗಿ ಸಂಶೋಧನೆ ಮಾಡಿದವರಲ್ಲ. ತಮ್ಮ ಸ್ಥಳೀಯ ನೆಲದ ಜಾನಪದಸಂಸ್ಕೃತಿಯನ್ನು ಸೃಜನಶೀಲರಾಗಿ ನೋಡಿದವರು. ಒಂದು ಸಾಂಪ್ರದಾಯಿಕ ಚೌಕಟ್ಟನ್ನು ಮೀರಿ ಜನಾಂಗವೊಂದರ ಧಾರ್ಮಿಕ, ಸಾಮಾಜಿಕ, ಲೌಕಿಕ ಚರ್ಚೆಯಲ್ಲಿ ತೊಡಗುತ್ತಾ ತಂಬೂರಿಯವರ ಪೂರ್ವೇತಿಹಾಸಗಳನ್ನು ವಿಶ್ಲೇಷಿಸಿದ್ದಾರೆ. ಅವರ ಶೈವಪಂಥದ ನಡವಳಿಕೆ, ಆಚಾರ ವಿಚಾರಗಳನ್ನು, ಸಾಹಿತ್ಯ ಸಾಮಾಜಿಕ, ಪೌರಾಣಿಕ, ಐತಿಹ್ಯ ಸಂಬಂಧಾರ್ಥಕ, ಬದುಕಿನ ನೀತಿ ಮೂಲದ ಕಾವ್ಯಗಳಾಗಿರುವುದನ್ನು ಕೂಲಂಕಷವಾಗಿ ಬಿಡಿಸಿ ನೋಡಿದವರಲ್ಲಿ

ರಾಜೇಗೌಡರು ಪ್ರಮುಖರಾಗುತ್ತಾರೆ. ಈ ಕೃತಿಯನ್ನು ಗಮನಿಸಿದಾಗ ಗೌಡರ ಹಿಂದಿನ ಆಲೋಚನೆಗಳು, ಚಿಂತನೆಗಳೆಲ್ಲ ಹೊಸರೂಪ ಪಡೆದು ಈ ಅಧ್ಯಯನದಲ್ಲಿ ಪ್ರಕಾಶಿತವಾಗಿವೆ. ವಕ್ತೃಗಳಿಂದ ತಂಬೂರಿ ಸಾಹಿತ್ಯವನ್ನು ಸಂಗ್ರಹಿಸಿ ಆಚರಣೆಗಳ ಹಿನ್ನಲೆಯನ್ನು ಗುರುತಿಸುತ್ತಾ ಹೊಸಅಂಶಗಳ ಕಡೆ ಗಮನಸೆಳೆಯುತ್ತಾರೆ. ತಂಬೂರಿಯವರ ಹಾಡಿನ ಧಾಟಿಗಳನ್ನು ಗುರುತಿಸುತ್ತಾ ಹೊಸಗ್ರಹಿಕೆಯತ್ತ ಸಾಗುತ್ತಾರೆ. ಇದುವರೆಗೆ ಕೇವಲ ಮೂರ್‍ನಾಲ್ಕು ಧಾಟಿಗಳಿಗಷ್ಟೇ ನಮ್ಮ ವಿದ್ವಾಂಸರು ತೃಪ್ತಿಪಟ್ಟುಕೊಂಡು ಸೀಮಿತವಾಗಿದ್ದಾಗ, ಅದನ್ನು ಒಡೆದುನೋಡುತ್ತಾ ಸುಮಾರು ಅರವತ್ತು ಧಾಟಿಗಳಿವೆ ಎಂದು ನೋಡಿರುವುದು ಸಂಶೋಧನೆಯ ಹೊಸಧಾಟಿಗೆ ಸಾಕ್ಷಿಯೂ ಆಗುತ್ತದೆ.

ರಾಜೇಗೌಡರು ಸಂಶೋಧನೆಯ ದಾರಿಯಲ್ಲಿ ಹೊರಟಾಗ ಅವರಿಗೆ ವಿಶೇಷವಾಗಿ ಕಂಡವರು ತಂಬೂರಿ ಸಂಪ್ರದಾಯದ ಎಡಗೈನವರು ಎಂದು ಕರೆಸಿಕೊಳ್ಳುವ ಮಾದಿಗರು. ಈ ಮಾದಿಗರು ಒಂದು ಕಾಲದಲ್ಲಿ ದೇವಾಲಯಗಳಲ್ಲಿ ಪೂಜಾರಿಗಳಾಗಿದ್ದವರು. (ಇದಕ್ಕೆ ಸಾಕ್ಷಿ ಎಂಬಂತೆ ಹಾಸನ ತಾಲ್ಲೂಕಿನ ತಂಬೂರಿಗೆ ಹೆಸರುವಾಸಿಯಾದ ಕಬ್ಬಳಿಗ್ರಾಮ ಹಾಗೂ ಮದ್ದದ ಕರೆ ಬೀರಣ್ಣನ ದೇವಾಲಯಗಳಲ್ಲಿ ಇಂದಿಗೂ ಮಾದಿಗರೆ ದೇವಾಲಯದಲ್ಲಿ ಪೂಜೆಮಾಡುವುದುಂಟು. ಆದರೆ ಅದೆಲ್ಲ ಸೀಮಿತ) ಆದರೆ ಗೌಡರು ಒಮ್ಮೆ ಮೇಲುಸ್ತರದಲ್ಲಿ ಗರ್ಭಗುಡಿಗಳಲ್ಲಿದ್ದವರು ತಮ್ಮ ಸ್ಥಾನಕ್ಕೆ ಚ್ಯುತಿಬಂದಾಗ ಎಂತಹ ಅನಾಹುತಗಳಾಗಿವೆ ಎಂಬುದನ್ನು ಕೂಡ ವಿಸ್ತ್ರತವಾಗಿ ಚರ್ಚಿಸಿದ್ದಾರೆ. ಅದೇ ಮಾದಿಗರು ರಾಜೇಗೌಡರ ಗಮನವನ್ನು ವಿಶೇಷವಾಗಿ ಸೆಳೆದಿರುವುದು ಈ ಅಧ್ಯಯನದಲ್ಲಿ ಕಾಣುತ್ತದೆ. ಅವರೇ ಹೇಳುವಂತೆ "ಇಪ್ಪತ್ತನೆಯ ಶತಮಾನವು ಎತ್ತಿನಗಾಡಿಯನ್ನು ಸೆಟಿಲೈಟಾಗಿ ತಂತ್ರಜ್ಞಾನದ ಕುದುರೆಯಾಗಿ ಪರಿವರ್ತಿಸಿದ ಕಾಲ. ನಮ್ಮೂರ ಹತ್ತಿರ ಎಡಗೈನವರು ಮನೆಕಸ ಗುಡಿಸಲೆಂದು ನಮ್ಮಂತಹವರಿಗೆ ಈಚಲು ಪೊರಕೆ

ಕಟ್ಟಿತರುತ್ತಿದ್ದರು. ಸುಗ್ಗಿ ದಿನಗಳಲ್ಲಿ ಬತ್ತದ ಹೊರೆಕಟ್ಟಲು ಹಗ್ಗದ ಮುಡಿ ತರುತ್ತಿದ್ದರು. 'ಜೋಡೆತ್ತಿನ ಗುರುತಿಗೆ ಓಟು ಕೊಡಿ' ಎಂದೆಲ್ಲಾ ಹೇಳುತ್ತಾ ಗಿರಕಿಮೆಟ್ಟುಹಾಕುವ ನಮ್ಮಪ್ಪನಂತವರಿಗೆ ಪೇಟೆಮಾದಿಗರು ಮೆಟ್ಟು ಹೊಲಿದು ಕೊಡುತ್ತಿದ್ದರು. ಅದೆಲ್ಲವೂ ನನ್ನ ಎಳೆಮನಸ್ಸಿಗೆ ಭಾರೀ ಕೈಗಾರಿಕೆ, ಅಪರೂಪದ ಮಾಂತ್ರಿಕ ವಸ್ತುಗಳಾಗಿ ಕಾಣುತ್ತಿದ್ದವು. ಒಂದೇ ಕುಲದ ಇವರಲ್ಲೂ ಉಪಭೇದ ತಿಳಿದಿರಲಿಲ್ಲ. ಅದೇ ಎಡಗೈ ಪೂಜಾರಿಗಳು ಶೃಂಗಾರದ ಅಡ್ಡೆ ಹೂಡಿ ಬೆಳ್ಳಿ ಮುಖದ ಮಾರಮ್ಮನ ಹೊತ್ತು ಅರೆಬಡಿದು ಹಾಡಿ ಹೊಗಳಿ ನನ್ನಂತಹವರನ್ನು ಮಂತ್ರಮುಗ್ಧರಾಗುವಂತೆ ಮಾಡಿಬಿಡುತ್ತಿದ್ದರು. ಬತ್ತದ ಭಿಕ್ಷೆಗಿಂತಾ ಏಲಕ್ಕಿ ಭಿಕ್ಷೆಯಲ್ಲಿ ಫಾಯಿದೆ ಹೆಚ್ಚೆಂದು ತಂಬೂರಿ ಹಿಡಿದು ತಾಳಚಿಲಿಕಿಸುತ್ತ ಹೊರಟ ಅವರಿಂದ ನನ್ನ ಮನದಾಳದಲ್ಲಿ ಅನುಭವ ಮೈದುಂಬಿರಬೇಕು! ನಮ್ಮಪ್ಪನ ಜೋಡೆತ್ತು ನಮ್ಮ ಮನೆಯಲ್ಲೇ ಮುದಿಯಾದವು. ಗಾಂಧಿ ಸಾಮ್ರಾಜ್ಯ ಮುಗಿದ ಮೇಲೆ ನನ್ನಪ್ಪನಂತರವರಿಗೇನು ಕೆಲಸ! ನಮ್ಮನೆಗೆ ರಾಮರಾಜ್ಯ ಬರಲಿಲ್ಲ" ಎಂದು ಅತ್ತ ಅನುಭಾವ ಪರಂಪರೆಯ ಕಡೆಗೆ, ಇತ್ತ ಅನುಭಾವಿ ಸೂಕ್ಷ್ಮತೆಯ ಕಡೆಗೆ ತಮ್ಮ ಗಮನ ಹರಿದಿರುವುದರ ಬಗ್ಗೆ ಹೇಳಿಕೊಳ್ಳುತ್ತಾರೆ. ಮೈಸೂರು, ಚಾಮರಾಜನಗರಗಳ ಕಡೆ ಮಂಟೆಸ್ವಾಮಿ, ಮಲೆ ಮಾದೇಶ್ವರಸ್ವಾಮಿ ಇರುವಂತೆ; ಮಲೆನಾಡಿನ ಭಾಗದಲ್ಲಿ ನಿರ್ವಾಣಸ್ವಾಮಿಯ ಪಂಥ ಇರುವುದನ್ನು ತಂಬೂರಿಯವರ ಸಾಹಿತ್ಯದ ಮೂಲಕ ಗುರುತಿಸಿ; ಮಂಟೆಸ್ವಾಮಿ, ಮಾದೇಶ್ವರನ ಸಾಲಿನಲ್ಲಿ ನಿರ್ವಾಣಸ್ವಾಮಿಯನ್ನು ಸೇರಿಸಿರುವುದೇ ಇವರ ಸಂಶೋಧನೆಯ ವೈಶಿಷ್ಟ್ಯತೆಯಾಗಿದೆ. ಕೃತಿಯ ಕೊನೆಯಲ್ಲಿ ತಮ್ಮ ಕ್ಷೇತ್ರಕಾರ್ಯದ ಹಿನ್ನೆಲೆಯಲ್ಲಿ ನಿರ್ವಾಣಸ್ವಾಮಿಯ ಬಗೆಗಿನ ವಿವರಗಳನ್ನು ಒದಗಿಸಿರುವುದು ಸೂಕ್ತವಾಗಿದ್ದು, ಮುಂದಿನ ಅಧ್ಯಯನಕಾರರಿಗೆ ದಿಕ್ಸೂಚಿಯೂ ಆಗಿದೆ.

ಒಟ್ಟಿನಲ್ಲಿ ಡಾ. ರಾಜೇಗೌಡ ಹೊಸಹಳ್ಳಿ ಅವರ "ತಾಳ ಬಂದೋ.... ತಂಬೂರಿ ಬಂದೋ" ಭಾರತದ ದೊಡ್ಡ ಕ್ಯಾನ್‌ವಾಸ್‌ನಲ್ಲಿ ಕರ್ನಾಟಕದ,

ಮುಖ್ಯವಾಗಿ ಹಾಸನ ಜಿಲ್ಲೆಯ ಸ್ಥಳೀಯ ಎನ್ನಬಹುದಾದ ಜನಪದ ಸಂಸ್ಕೃತಿಯ ನೆಲೆಯಲ್ಲಿ ಕ್ರಿಯಾಶೀಲವಾಗಿರುವ ತಂಬೂರಿ 'ಸಂಗೀತ–ಸಾಹಿತ್ಯ' ಪ್ರಕಾರವನ್ನು ಕುರಿತ ಚಿಂತನಶೀಲ ಕೃತಿ. ಇನ್ನೊಂದು ದೃಷ್ಟಿಯಲ್ಲಿ ಆ ಪ್ರಕಾರದೊಡನೆ ತಾಕಲಾಡಿದ ಬಹುಕಾಲಗಳ 'ಭಾರತ ಕರ್ನಾಟಕ'ದ ಸಾಂಸ್ಕೃತಿಕ ಚರಿತ್ರೆ' ಎಂಬ ಪ್ರೊ. ಹಿ. ಶಿ. ರಾಮಚಂದ್ರೇಗೌಡ ಅವರ ಮಾತುಗಳು ಈ ಕೃತಿಯ ಸತ್ವವನ್ನು, ಮೌಲ್ಯವನ್ನು ಹೇಳುತ್ತವೆ.

ಮಲೆನಾಡ ಸೆರಗಲ್ಲಿ ನಿಂತು : ಇದು ರಾಜೇಗೌಡರ ಮತ್ತೊಂದು ಜಾನಪದ ವೈಚಾರಿಕ ಗ್ರಹಿಕೆಯ ಕೃತಿ. ಇದರಲ್ಲಿ ಹದಿನೆಂಟು ಲೇಖನಗಳಿದ್ದು ಎಲ್ಲವೂ ವೈಶಿಷ್ಟ್ಯತೆಯಿಂದ ಕೂಡಿದ್ದು ಮನುಷ್ಯಕುಲದ ಇತಿಹಾಸದ ಹಲವು ಮಜಲುಗಳನ್ನು ಮುಖಾಮುಖಿಯಾಗಿಸುವ ಚಿಂತನೆಗಳಿಂದ ಕೂಡಿವೆ. ಇಲ್ಲಿ ಕುವೆಂಪು, ಹಡಪದ ಅಪ್ಪಣ್ಣ–ಹೆಂಡದ ಮಾರಯ್ಯ, ಬಡಗಿ, ಒಕ್ಕಲಿಗ, ಮಾನವಶಾಸ್ತ್ರಜ್ಞ, ಜಾನಪದತಜ್ಞ, ಪರಿಸರವಾದಿ, ಸಮಾಜ ಸುಧಾರಕ, ದೆವ್ವ–ಗಿವ್ವ, ಪ್ರಾಣಿ, ಹೆಣ್ಣು, ಗಾಂಧಿ, ಅಂಬೇಡ್ಕರ್, ಬುದ್ಧ, ಬಸವಣ್ಣ ಎಲ್ಲರೂ ಇಲ್ಲಿದ್ದು ಗಹನವಾದ ಚರ್ಚೆಯಾಗಿದೆ. ಒಂದು ಸಮಾಜದಿಂದ ಬಂಧಮುಕ್ತ ಸಮಾಜದ ಕಡೆ ಮಾನವ ಓಡುತ್ತಿರುವ ಎಲ್ಲಾ ಹೆಜ್ಜೆಗುರುತುಗಳು ಇಲ್ಲಿ ದಾಖಲಾಗಿವೆ. ಒಂದು ಹಾಳುಗುಡಿಯ ಜೀರ್ಣೋದ್ಧಾರಕ್ಕಿಂತ ಒಂದು ಶಾಲೆ, ಒಂದು ಗ್ರಂಥಾಲಯವನ್ನು ನಿರ್ಮಿಸಿದರೆ ನಾಳೆಗೆ ಕಾಲಿಟ್ಟಂತೆ ಎಂದು ಹೇಳುವ ಅವರ ಮಾತು ಜಾನಪದವನ್ನು ವಿರೋಧಿಸುವಂತಹವುಗಳಲ್ಲ, ಸಮಕಾಲೀನ ಸಂದರ್ಭದಲ್ಲಿ ಜಾನಪದವನ್ನು ನೋಡುವ ರೀತಿಯಾಗಿದೆ. ಇದೇ ಜಾನಪದತಜ್ಞರಿಗೆ ಇರಬೇಕಾದ ಗ್ರಹಿಕೆ. ರಾಜೇಗೌಡರು ಗಾಂಧಿ ತತ್ವ ಗೊತ್ತಿಲ್ಲದ ತನ್ನ ಅಜ್ಜನಲ್ಲಿ ಜಾನಪದವಿದ್ದು ಅವನಲ್ಲಿ ಬುದ್ಧನಿರುವುದನ್ನು; ಅಪ್ಪನಿಗೆ ಗಾಂಧಿತತ್ವ ಗೊತ್ತಿದ್ದು ಬಸವಣ್ಣನಿರುವುದನ್ನು, ಇವೆರಡೂ ಪರಿಕಲ್ಪನೆಗಳೂ ಮಹಾತ್ಮ ಗಾಂಧಿಯಲ್ಲಿದ್ದು; ತನ್ನ ಬದುಕಿನಲ್ಲಿ ಗಾಂಧಿ

ಅಂಬೇಡ್ಕರ್ ಇಬ್ಬರೂ ಆವರಿಸಿರುವುದನ್ನು ಹೇಳುತ್ತಾ ಜಾನಪದ ಬದುಕಿನಲ್ಲಿ ಗಾಂಧಿ–ಅಂಬೇಡ್ಕರ್ ತಳುಕುಹಾಕಿಕೊಳ್ಳುವುದನ್ನು ಗ್ರಹಿಸಿರುವುದೇ ಗೌಡರ ಬರಹ.

"ಆಡುಗಳ ನಂಬಿವರೆ ಬೋಳು ಈ ನಾಡು' ಎಂಬ ಬರಹ ಮಾತ್ರ ಗೌಡರಲ್ಲಿ ಪರಿಸರದ ಬಗ್ಗೆ ಇರುವ ಅತೀವಕಾಳಜಿಯನ್ನು ತೋರುತ್ತದೆ. ಆಡು ದಿನವೊಂದಕ್ಕೆ ಸುಮಾರು ಐದು ಕೆ.ಜಿ. ಸೊಪ್ಪುತಿಂದರೆ ವರ್ಷಕ್ಕೆ 1825 ಕೆ.ಜಿ. ಸೊಪ್ಪನ್ನು ತಿನ್ನುತ್ತದೆ. ಇಡೀ ಅದರ ಜೀವಮಾನ ಲೆಕ್ಕ ಹಾಕಿದರೆ ಕಾಡೇ ನಾಶವಾಗುತ್ತದೆ. ಆದ್ದರಿಂದ ಗ್ರಾಮೀಣರ ಮನ ಒಲಿಸುವ ಮೂಲಕ ಪರಿಸರ ಉಳಿಸಲು ಆಂದೋಲನಮಾಡಬೇಕಾದುದು ಅವಶ್ಯಕ ಎನ್ನುತ್ತಾರೆ. ಇದು ಜೀವವಿರೋಧಿ ನಿಲುವಲ್ಲ. ಪರಿಸರ ನಿಲುವು.

ಈ ಕೃತಿಯ ಬಗ್ಗೆ ಡಾ. ಬಸವರಾಜ ಕಲ್ಗುಡಿಯವರು "ಡಾ. ರಾಜೇಗೌಡ ಹೊಸಹಳ್ಳಿ ಇವರ ಚಿಂತನಶೀಲ ಮನಸ್ಸಿನೊಳಗೆ ಸೃಜನಶೀಲ ಬಳ್ಳಿ ಅದೆಷ್ಟು ಚೆನ್ನಾಗಿ ಹಾಸುಹೊಕ್ಕಾಗಿದೆ! ಜಾನಪದ ಗ್ರಹಿಕೆಯನ್ನು ಇವರಷ್ಟು ನವನವೀನವಾಗಿ, ಹೌದೆಂದು ತಲೆತೂಗುವಂತೆ ವಿಸ್ತರಿಸಿಕೊಂಡ ಬಗೆಯನ್ನು ನಾನು ಈವರೆಗೆ ಕಂಡಿಲ್ಲ. 'ಇಪ್ಪತ್ತನೇ ಶತಮಾನದ ಪ್ರಾರಂಭದಲ್ಲಿ ನಮ್ಮ ಸಮುದಾಯವು ತನ್ನೆಲ್ಲ ಸಂಘರ್ಷಗಳ ನಡುವೆ ಆರೋಗ್ಯಕರ ಮನಃಸ್ವಾಸ್ಥ್ಯವನ್ನು ಗಳಿಸಿಕೊಳ್ಳುವ ಅವಕಾಶದಿಂದ ತಪ್ಪಿಸಿಕೊಂಡಿತೇ?– ಈ ಪ್ರಶ್ನೆಯೇ ಇವರ ಚಿಂತನೆಯಾಗಿ, ಜನಪದಸತ್ವದ ದ್ರವ್ಯವಾಗಿ ರಾಜೇಗೌಡರ ಇಲ್ಲಿನ ಲೇಖನಗಳಲ್ಲಿ ಒಳಶೃತಿಯಾಗಿ ಮಿಡಿದಿದೆ" ಎಂಬ ಮಾತುಗಳು ಗೌಡರ ವಿಚಾರ ಪ್ರಸ್ತುತತೆಗೆ ಕನ್ನಡಿ ಹಿಡಿದಂತಾಗಿದೆ.

ಮೇಲಿನ ಕೃತಿಗಳಲ್ಲದೆ ರಾಜೇಗೌಡರು ಕಾನೂನು ತಿಳುವಳಿಕೆಗೆ ಸಂಬಂಧಿಸಿದಂತೆ "ನೋಂದಣಿ ಮುದ್ರಾಂಕ ಕೈಪಿಡಿ" ಯನ್ನು ಪ್ರಕಟಿಸಿದ್ದು,

ಅದು ಇಲಾಖೆಯ ಪ್ರಶಂಸೆಗೆ ಒಳಗಾಗಿದೆ. ಒಟ್ಟಿನಲ್ಲಿ "ರಾಜೇಗೌಡರು ಒಂದು ತಲೆಮಾರಿನಲ್ಲಿ ನಿಂತು ಹಿಂದಿನ ತಲೆಮಾರು ಹುಡುಕುತ್ತಾರೆ. ನಿಂತ ತಲೆಮಾರಿನಲ್ಲಿ ವೈಚಾರಿಕ ಚರ್ಚೆಗಳನ್ನು ಎತ್ತಿಕೊಳ್ಳುತ್ತಾರೆ. ಅವರ ಸೃಜನಶೀಲ ಕೃತಿಗಳಾದ ಕತೆಗಳಲ್ಲಿ, ಜನಪದ ಸಂಶೋಧನಾ ಲೇಖನಗಳಲ್ಲಿ, ಕೃತಿಗಳಲ್ಲಿ ತಲೆಮಾರಿನ ಅಂತರಾಳಗಳನ್ನು ಹುಡುಕಲುಪ್ರಯತ್ನಿಸುತ್ತಾರೆ. ಪ್ರಾಣಿ ಪಕ್ಷಿಗಳಲ್ಲಿ ಹುಡುಕಲಾಗದ ತಲೆಮಾರಿನ ಅಂತರವನ್ನು ಮಾನವ ತತ್ವಗಳಲ್ಲಿ ಹುಡುಕಲು ಪ್ರಯತ್ನಿಸುತ್ತಾರೆ. ಗ್ರಾಮೀಣ ರಾಜಕೀಯರಂಗದಲ್ಲಿ ಮನುಷ್ಯತ್ವದ ಹುಡುಕಾಟ ನಡೆಸುತ್ತಾರೆ. ಸರ್ವರ ಬದುಕನ್ನು ಪ್ರೀತಿಸುತ್ತಾರೆ. ಮೌಲ್ಯಯುತ ಜನಪದ ಅಂತರಂಗಗಳನ್ನು ಸ್ವೀಕರಿಸಲು ಪ್ರಯತ್ನಿಸುತ್ತಾರೆ" ಎಂಬ ಡಾ. ಚಕ್ಕೆರೆ ಶಿವಶಂಕರ್ ಅವರ ಮಾತುಗಳು ರಾಜೇಗೌಡರ ಇಡೀ ಸಾಹಿತ್ಯದ ಆಶಯಗಳನ್ನು ಹೇಳುತ್ತವೆ. ರಾಜೇಗೌಡರು ಪ್ರಸ್ತುತ ಸಂದರ್ಭದ ಒಬ್ಬ ದೊಡ್ಡ ಚಿಂತಕ, ಬರಹಗಾರರು ಆಗಿದ್ದಾರೆ ಎಂಬುದೇ ಸಾಹಿತ್ಯಲೋಕದ ಹಾಗು ನಮ್ಮೆಲ್ಲರ ಹೆಮ್ಮೆಯ ಸಂಗತಿಯಾಗಿದೆ. ರಾಜೇಗೌಡರು ಎಚ್.ಎಲ್. ನಾಗೇಗೌಡರು, ಮಾಸ್ತಿ, ಪು.ತಿ.ನ., ಕೆ.ಎಸ್.ನ., ಸಿದ್ಧಯ್ಯ ಪುರಾಣಿಕರ ಹಾದಿಯನ್ನು ತುಳಿದವರು. ಈ ಹಾದಿಯಲ್ಲಿಯೇ ಇನ್ನೂ ಬಹುದೂರ ಸಾಗಲಿ ಎಂಬುದೇ ನನ್ನ ಅಭಿಲಾಷೆ.

* * *

ಡಾ. ರಾಜೇಗೌಡ ಹೊಸಹಳ್ಳಿ

ಡಾ. ರಾಜೇಗೌಡ ಹೊಸಹಳ್ಳಿ ಅವರು ಸಾಂಸ್ಕೃತಿಕ ಜಾನಪದದ ಮೂಲಚೂಲಗಳನ್ನು ತಲಸ್ಪರ್ಶಿಯಾಗಿ ದರ್ಶಿಸಿ ಹೊಸ ಹೊಳಹುಗಳನ್ನು ಹೊರಹೊಮ್ಮಿಸುವುದರಲ್ಲಿ ಹೆಸರಾದ ಜಾನಪದ ಚಿಂತಕರು. ಅವರ ಮಂಥನದಲ್ಲಿ ಜನಪದ-ಶಿಷ್ಟ, ಪ್ರಾಚೀನ-ಅರ್ವಾಚೀನ, ಕನ್ನಡ-ಕನ್ನಡೇತರ, ಸ್ವದೇಶಿ-ವಿದೇಶಿ ಆಲೋಚನೆಗಳು ಸಮತೂಕದಲ್ಲಿ ಮೇಳವಿಸಿರುತ್ತವೆ. ಅವರ ಸಾಂಸ್ಕೃತಿಕ ಹುಡುಕಾಟ ಅರ್ಥಪೂರ್ಣವಾಗಿರುತ್ತದೆ. ಡಾ. ರಾಜೇಗೌಡರ ಬದುಕು ಬರಹಗಳ ಸ್ಥೂಲ ಪರಿಚಯವನ್ನು ಪ್ರಸ್ತುತ ಗ್ರಂಥ ಪರಿಣಾಮಕಾರಿಯಾಗಿ ಮಾಡಿಕೊಡುತ್ತದೆ.

- ಪ್ರೊ. ಡಿ. ಲಿಂಗಯ್ಯ

ಕರ್ನಾಟಕ ಜಾನಪದ ಪರಿಷತ್ತು

ನಂ.೧, ಜಾನಪದ ಸಿರಿಭುವನ, ಜಲದರ್ಶಿನಿ ಬಡಾವಣೆ,
ಎಂ.ಎಸ್. ರಾಮಯ್ಯ ಆಸ್ಪತ್ರೆ ಮಹಾದ್ವಾರದ ಹತ್ತಿರ, ಹೊಸ ಬಿ.ಇ.ಎಲ್. ರಸ್ತೆ,
ಬೆಂಗಳೂರು - ೫೬೦ ೦೫೪